ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 5
ಮಾರ್ಚ್ 2024

SHRIDEVI ANTARANGA
Monthly Magazine

SHRIDEVI EDUCATION







ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ಡಾ.ಶಿವಕುಮಾರ ಸ್ವಾಮಿಗಳ ಕ್ರಿಯಾಶೀಲತೆಗೆ ಅಳತೆಯೆ ಇಲ್ಲ. ಶೂನ್ಯದಿಂದ ಬೃಹತ್ ವಿದ್ಯಾಸಾಮ್ರಾಜ್ಯವನ್ನು ಸೃಷ್ಟಿಸಿದ ಕೀರ್ತಿ ಇವರದು. ಇಂದು ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

## ಜಗದ ಭಾಗ್ಯ ಶತಾಯುಷಿ ಡಾ.ಶಿವಕುಮಾರ ಸ್ವಾಮೀಜಿ



**ಸದ್ದು ಗದ್ದಲವಿರದ**
**ಸಾಧನೆಯಿಲ್ಲಿ ಗದ್ದುಗೆಯೇರಿದೆ**
**ಕಾಯಕವೇ ಕೈಲಾಸವೆನ್ನುವ**
**ಮಾತು ಕೃತಿಯೊಳು ಮೂಡಿದೆ**
**ಕಾವಿಯುಡುಗೆಯನುಟ್ಟು ನಭವೇ**
**ಕಿರಣ ಹಸ್ತವ ಚಾಚಿದೆ**
**ಎಲ್ಲ ನನ್ನವರೆನ್ನುವ ಭಾವದ**
**ಕರುಣೆಯೇ ಕಣ್ತೆರೆದಿದೆ.**

'ನಡೆದಾಡುವ ದೇವರು' ಎಂದೇ ಪ್ರಸಿದ್ಧರಾಗಿರುವ ಪರಮ ಪೂಜ್ಯ ಡಾ.ಶಿವಕುಮಾರ ಸ್ವಾಮೀಜಿ ಅವರನ್ನು ಕುರಿತು ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಅವರು ಬರೆದ ಕವನಗಳು ಎಲ್ಲರಿಗೂ ಪ್ರೇರಣೆ ನೀಡುವಂತಹುದು. ಡಾ.ಶಿವಕುಮಾರ ಸ್ವಾಮೀಜಿ ಅವರ ಸಮಗ್ರ ವ್ಯಕ್ತಿತ್ವವನ್ನು ಈ ಕವನದ ನಾಲ್ಕು ಸಾಲುಗಳು ಪರಿಚಯಿಸುತ್ತದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ವೀರಾಪುರದ ಪುಣ್ಯ ದಂಪತಿಗಳಾದ ಹೊನ್ನೇಗೌಡ ಮತ್ತು ಗಂಗಮ್ಮ ಅವರಿಗೆ ದಿನಾಂಕ.1.4.1907ರಲ್ಲಿ ಶ್ರೀಗಳು ಜನಿಸುತ್ತಾರೆ. ಅವರ ಬಹುತೇಕ ವಿದ್ಯಾಭ್ಯಾಸದ ಅವಧಿ ತುಮಕೂರಿನಲ್ಲೇ ಜರುಗುತ್ತದೆ. ಆಗಲೇ ಅವರಿಗೆ ಪೂಜ್ಯ ಉದ್ದಾನಸ್ವಾಮಿಗಳ ಸಂಪರ್ಕಕ್ಕೆ ಇವರು ಬರುತ್ತಾರೆ. ಆಗ ಪ್ಲೇಗ್ ಎಲ್ಲೆಡೆ ಜೋರಾಗಿತ್ತು. ಆದರೂ ಶ್ರೀಗಳು ಸಿದ್ಧಗಂಗಾ ಮಠದ ಸಂಪರ್ಕ ಬಿಟ್ಟಿರಲಿಲ್ಲ. ಪೂಜ್ಯ ಉದ್ದಾನಸ್ವಾಮಿಗಳಿಗೆ ತಮ್ಮ ಉತ್ತರಾಧಿಕಾರಿ ಇವರೇ ಎಂದು ಎಂದೋ ತೀರ್ಮಾನವಾಗಿರುತ್ತದೆ. 1930ರ ಮಾರ್ಚ್ 3 ರಂದು ಶಿವಣ್ಣ ಶಿವಕುಮಾರ ಸ್ವಾಮಿಗಳಾಗಿ 'ಸಿದ್ಧಗಂಗಾ ಮಠದ' ಅಧಿಕಾರವನ್ನು ಸ್ವೀಕರಿಸುತ್ತಾರೆ. ಆಗ ಕೇವಲ ಹೆಸರಿಗೆ ಮಾತ್ರ ಮಠವಿತ್ತು. ಸಣ್ಣ ಪ್ರಮಾಣದ ಸಂಸ್ಕೃತ ಪಾಠಶಾಲೆ ಮಾತ್ರವಿತ್ತು.

ಡಾ.ಶಿವಕುಮಾರ ಸ್ವಾಮಿಗಳ ಕ್ರಿಯಾಶೀಲತೆಗೆ ಅಳತೆಯೇ ಇಲ್ಲ. ಶೂನ್ಯದಿಂದ ಬೃಹತ್ ವಿದ್ಯಾಸಾಮ್ರಾಜ್ಯವನ್ನು ಸೃಷ್ಟಿಸಿದ ಕೀರ್ತಿ ಇವರದು. ಇಂದು ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ಜನರಿಗೆ ಉದ್ಯೋಗ ನೀಡಿದ ಕೀರ್ತಿ ಸಹ ಮಠಕ್ಕೆ ಸೇರುತ್ತದೆ. ತ್ರಿವಿಧ ದಾಸೋಹ ಅಂದರೆ ಅನ್ನ ದಾಸೋಹ, ಅಕ್ಷರ ದಾಸೋಹ ಹಾಗೂ ಜ್ಞಾನ ದಾಸೋಹಗಳನ್ನು ಅನುಷ್ಠಾನ ಮಾಡಿದ ಕೀರ್ತಿ ಇವರದು.

ಡಾ.ಶಿವಕುಮಾರಸ್ವಾಮಿಗಳದು ನಿಜವಾದ ವೈರಾಗ್ಯದ ಬದುಕು. ಬ್ರಹ್ಮಚರ್ಯೆ ಅವರ ಶಕ್ತಿಯಾಗಿತ್ತು. ಭಾರತೀಯ ಸಂಸ್ಕೃತಿಯಲ್ಲಿ ವಿವರಿಸಿದಂತೆ ಸನ್ಯಾಸಿ ಜೀವನ ನಡೆಸಿದ ಕೀರ್ತಿ ಇವರದು. ರಾತ್ರಿ 2.30ಕ್ಕೆ ಪ್ರಾರಂಭವಾಗುತ್ತಿದ್ದ ಅವರ ದಿನಚರಿ ರಾತ್ರಿ 11 ಗಂಟೆ ತನಕ ನಿರಂತರವಾಗಿ ಮುಂದುವರೆಯುತ್ತಿತ್ತು. ಅವರೆಂದು ವಿದ್ಯಾರ್ಥಿಗಳು ಮಾಡುತ್ತಿದ್ದ ಬೆಳಗ್ಗೆ ಮತ್ತು ಸಂಜೆಯ ಸಾಮೂಹಿಕ ಪ್ರಾರ್ಥನೆಯನ್ನು ತಪ್ಪಿಸುತ್ತಿರಲಿಲ್ಲ. ಅವರ ಇರುವಿಕೆಯೇ ಮಠದ ಇಡೀ ಪರಿಸರಕ್ಕೆ ಚೈತನ್ಯದಾಯಕವಾಗಿರುತ್ತಿತ್ತು.

▶▶ 2ನೇ ಪುಟಕ್ಕೆ...

# ಚುನಾವಣೆ ಹಬ್ಬವಲ್ಲ ಜವಾಬ್ದಾರಿ ನೆನಪಿಸುವ ಗಳಿಗೆ

▪ ಡಾ. ಎಂ.ಆರ್. ಹುಲಿನಾಯ್ಕರ್

ದೇಶ ಮತ್ತೊಂದು ಚುನಾವಣೆಯ ಹೊಸ್ತಿಲಿನಲ್ಲಿ ಬಂದು ನಿಂತಿದೆ. ಕೇಂದ್ರ ಚುನಾವಣಾ ಆಯೋಗ ಮಾರ್ಚ್ 16ರಂದು 18ನೆಯ ಲೋಕಸಭೆಗೆ ಚುನಾವಣಾ ವೇಳಪಟ್ಟಿಯನ್ನು ಪ್ರಕಟಿಸಿದೆ. ಈಗಾಗಲೇ ಕಳೆದ ಒಂದು ವರ್ಷದಿಂದ ದೇಶ ಲೋಕಸಭಾ ಚುನಾವಣೆಯನ್ನು ಎದುರು ನೋಡುತ್ತಿತ್ತು. ಸರ್ಕಾರ ಮತ್ತು ರಾಜಕೀಯ ಪಕ್ಷಗಳು ತಮ್ಮೆಲ್ಲಾ ಚಟುವಟಿಕೆಗಳನ್ನು ಲೋಕಸಭೆಯ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಿದ್ದವು. ಅದಕ್ಕಾಗಿ ಪಾದಯಾತ್ರೆಗಳು ನಡೆದವು. ಇನ್ನು ರ್‍ಯಾಲಿಗಳಿಗೆ ಲೆಕ್ಕವಿಲ್ಲ. ವಿವಿಧ ಗ್ಯಾರಂಟಿಗಳು ಘೋಷಣೆಯಾದವು. ಅಗತ್ಯ ವಸ್ತುಗಳ ಬೆಲೆಗಳು ತಾತ್ಕಾಲಿಕವಾಗಿ ಇಳಿದವು. ರಾಜಕೀಯ ನಾಯಕರು ಪ್ರಜ್ಞಾಪೂರ್ವಕವಾಗಿ ತಮ್ಮ ಭಾಷೆಯ ಬಳಕೆಯಲ್ಲಿ ಮೃದುತ್ವ ನೀತಿ ಅನುಸರಿಸಿದರು. ಆಡಳಿತಗಾರರು ದೇಶದಲ್ಲಿ ಯಾವುದೇ ಸಮಸ್ಯೆಗಳಿಲ್ಲವೆಂದು ಬಿಂಬಿಸತೊಡಗಿದರು. ಹೇಗಾದರೂ ಮಾಡಿ ಮತದಾರರನ್ನು ಸನ್ಮೋಹನಗೊಳಿಸುವುದೇ ಅವರೆಲ್ಲರ ನೈಜ ಗುರಿಯಾಗಿದೆ. ಮತದಾರರನ್ನು ವಾಸ್ತವದಿಂದ ಬೇರೆ ಕಡೆ ಕರೆದೊಯ್ಯಲು ರಾಜಕೀಯ ಪಕ್ಷಗಳು ಮತ್ತು ಮಾಧ್ಯಮಗಳು ಜಂಟಿಯಾಗಿ ಪ್ಲಾನ್ ಮಾಡಿವೆ.

2024ರ ಏಪ್ರಿಲ್ 19ರಿಂದ ಪ್ರಾರಂಭವಾಗುವ ಮತದಾನ ಪ್ರಕ್ರಿಯೆ ಜೂನ್ 1ರ ತನಕ ಮುಂದುವರಿಯುತ್ತದೆ. ಒಟ್ಟು ಏಳು ಹಂತದಲ್ಲಿ ಚುನಾವಣೆಯ ನಡೆಸಲು ಚುನಾವಣಾ ಅಯೋಗ ಸಿದ್ಧತೆ ಮಾಡಿಕೊಂಡಿದೆ. ಒಟ್ಟು 543ಲೋಕಸಭಾ ಸ್ಥಾನಗಳಿಗೆ ಈಗ ಚುನಾವಣೆ ನಡೆಯುತ್ತದೆ. ಅಲ್ಲಿ 10.05 ಮತಗಟ್ಟೆಗಳಿರುತ್ತವೆ. ಒಟ್ಟು 96.8 ಕೋಟಿ ಮತದಾರರು ತಮ್ಮ ಮತ ಚಲಾಯಿಸುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್ 26 ಮತ್ತು ಮೇ 7ರಂದು ಎರಡು ಹಂತಗಳಲ್ಲಿ ಈ ಚುನಾವಣೆ ನಡೆಯುತ್ತದೆ. ರಾಜ್ಯದಲ್ಲಿ 5.42 ಕೋಟಿ ಮತದಾರರು ತಮ್ಮ ಮತವನ್ನು ಚಲಾಯಿಸಲಿದ್ದಾರೆ.

ಈ ಸಂದರ್ಭದಲ್ಲಿ 1952ರಲ್ಲಿ ನಡೆದ ಭಾರತದ ಮೊದಲ ಲೋಕಸಭಾ ಚುನಾವಣೆಯ ಮುಖ್ಯ ಘಟನೆಗಳನ್ನು ಜ್ಞಾಪಿಸಿಕೊಳ್ಳುವುದು ಅಗತ್ಯವಿದೆ. 1951 ಅಕ್ಟೋಬರ್ 25ರಿಂದ 1952ರ ಫೆಬ್ರವರಿ 21ರ ತನಕ ಈ ಚುನಾವಣೆ ನಡೆಯಿತು. ಆಗ ಒಟ್ಟು 68 ಹಂತಗಳಲ್ಲಿ ಈ ಚುನಾವಣೆ ನಡೆದಿತ್ತು.

ಭಾರತದಲ್ಲಿ ನಡೆದ ಮೊದಲ ಚುನಾವಣೆಯನ್ನು ವರದಿ ಮಾಡಲು ಇಂಗ್ಲೆಂಡ್, ಅಮೆರಿಕ ಮತ್ತು ಆಸ್ಟ್ರೇಲಿಯಾ ಕಡೆಯಿಂದ ಮಾಧ್ಯಮ ಪ್ರತಿನಿಧಿಗಳು ಬಂದಿದ್ದರು. ಭಾರತದ ಜನತೆ ಪ್ರಜಾಪ್ರಭುತ್ವವನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವ ಕುತೂಹಲ ಅವರಲ್ಲಿತ್ತು.

ಆಗ ಭಾರತದ ಲೋಕಸಭೆಯ ಸದಸ್ಯರ ಸಂಖ್ಯೆ 489. ಮತದಾನ ಮಾಡಬೇಕಾದರೆ 21ವರ್ಷಗಳಾಗಿರಬೇಕಾಗಿತ್ತು. ಸುಕುಮಾರನ್ ಸೇನ್ ಅವರು ರಾಷ್ಟ್ರದ ಮೊದಲ ಚುನಾವಣಾ ಆಯುಕ್ತರು. ಅವರೇ 1952ರ ಲೋಕಸಭಾ ಚುನಾವಣೆ ನಡೆಸಿದ್ದರು. ದೇಶದಲ್ಲಿ ಒಟ್ಟು 17.32 ಕೋಟಿ ಮತದಾರರಿದ್ದರು. ಶೇಕಡ 44.99ರಷ್ಟು ಮತದಾನವಾಗಿತ್ತು. ಹಿಮಾಚಲ ಪ್ರದೇಶದಲ್ಲಿ ಮೊದಲ ಮತದಾನವಾಗಿತ್ತು. ಹೆಂಗಸರು ಕಡಿಮೆ ಸಂಖ್ಯೆಯಲ್ಲಿ ಮತದಾನ ಮಾಡಿದ್ದರು. ಎತ್ತಿನಗಾಡಿಯಲ್ಲಿ ಮತಪಟ್ಟಿಗೆ ಸಾಗಿಸಿದ ಉದಾಹರಣೆಗಳಿವೆ. ಮತದಾನಕ್ಕೆ ನೇಮಕಗೊಂಡ ಸರ್ಕಾರಿ ಅಧಿಕಾರಿಗಳು ನಡೆದುಕೊಂಡು ಹೋಗಿ ತಮ್ಮ ಕರ್ತವ್ಯದ ಸ್ಥಳವನ್ನು ತಲುಪಿದ್ದರು. ಈ ಚುನಾವಣೆಗೆ ಒಟ್ಟು 10.45ಕೋಟಿ ರೂ.ಗಳು ವೆಚ್ಚವಾಗಿದ್ದವು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ 364 ಸ್ಥಾನಗಳನ್ನು ಪಡೆದುಕೊಂಡು ಮೊದಲ ಸ್ಥಾನದಲ್ಲಿತ್ತು. ಸಿ.ಪಿ.ಎಂ. ಪಕ್ಷಕ್ಕೆ 16 ಲೋಕಸಭಾ ಸ್ಥಾನಗಳು ಬಂದಿದ್ದವು. ಜಯಪ್ರಕಾಶ ನಾರಾಯಣ ನೇತೃತ್ವದ ಸಮಾಜವಾದಿ ಪಕ್ಷ 14 ಲೋಕಸಭಾ ಸ್ಥಾನಗಳನ್ನು ಗಳಿಸಿತ್ತು. ಕಾಂಗ್ರೆಸ್‌ನ ನಾರಾಯಣ ಸದೋಲಾ ಎನ್ನುವವರು 14ಸಾವಿರ ಮತಗಳಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಪರಾಭವಗೊಳಿಸಿದ್ದರು.

▶▶ 6ನೇ ಪುಟಕ್ಕೆ...



ದೇಶದ ಪ್ರಜಾಪ್ರಭುತ್ವದ ಕೇಂದ್ರ

# ಜಗದ ಭಾಗ್ಯ ಶತಾಯುಷಿ ಡಾ.ಶಿವಕುಮಾರ ಸ್ವಾಮೀಜಿ

◀◀ ...ಮೊದಲನೇ ಪುಟದಿಂದ

ಇಂದು ಡಾ.ಶಿವಕುಮಾರ ಸ್ವಾಮೀಜಿ ಅವರ ದುಡಿಮೆ ಫಲ ಕೊಟ್ಟಿದೆ. ಕರ್ನಾಟಕದ ಎಲ್ಲಾ ಭಾಗದಿಂದ ವಿದ್ಯಾರ್ಥಿಗಳು ಇಲ್ಲಿಗೆ ಬಂದು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಅವರ ಸಂಖ್ಯೆ ತುಂಬಾ ದೊಡ್ಡದಿದೆ. ಒಂದು ಪಕ್ಷ ಸಿದ್ಧಗಂಗಾ ಮಠವಿಲ್ಲದಿದ್ದರೆ ಎಷ್ಟೋ ಜನ ವಿದ್ಯೆಯನ್ನೇ ಪಡೆಯುತ್ತಿರಲಿಲ್ಲ. ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕು ನೀಡಿದ ಕೀರ್ತಿ ಈ ಸಂಸ್ಥೆಗೆ ಸೇರುತ್ತದೆ. ಡಾ. ಶಿವಕುಮಾರ ಸ್ವಾಮಿಗಳ ಕನಸನ್ನು ಅಚ್ಚುಕಟ್ಟಾಗಿ ಕಾರ್ಯರೂಪಕ್ಕೆ ತರುತ್ತಿರುವವರು ಅವರ ಶಿಷ್ಯರಾದ ಪೂಜ್ಯ ಶ್ರೀಸಿದ್ಧಲಿಂಗಸ್ವಾಮಿಗಳು. ಪ್ರಾಯಶಃ ಡಾ.ಶಿವಕುಮಾರ ಸ್ವಾಮೀಜಿ ಹೇಗೆ ತಮ್ಮ ಗುರುಗಳ ಋಣವನ್ನು ತೀರಿಸಿದರೋ, ಅದೇ ರೀತಿ ಪೂಜ್ಯ ಸಿದ್ಧಲಿಂಗಸ್ವಾಮಿಗಳು ತಮ್ಮ ಗುರುಗಳ ಆಶಯಕ್ಕನುಗುಣವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಡಾ. ಶಿವಕುಮಾರ ಸ್ವಾಮಿಗಳ ಶಿಸ್ತು ಅವರ ವ್ಯಕ್ತಿತ್ವವನ್ನು ಉನ್ನತ ಶ್ರೇಣಿಗೆ ತೆಗೆದುಕೊಂಡು ಹೋಗಿದೆ. ಅವರು ತುಂಬಾ ಮಿತಹಾರಿಗಳು. ಬೇವಿನ ಚೆಕ್ಕೆಯ ಕಷಾಯವನ್ನು ಎಂದು ಬಿಟ್ಟವರಲ್ಲ. ಅವರು ತಮ್ಮ ಕೊನೆಯ ತನಕ ಉತ್ತಮ ಆರೋಗ್ಯವನ್ನಿಟ್ಟುಕೊಂಡಿದ್ದರು. ವಯೋಸಹಜವಾದ ಕಾಯಿಲೆಗಳು ಅವರನ್ನು ಕಾಡಿರಬಹುದು. ಯಾವುದೇ ಗಂಭೀರ ಕಾಯಿಲೆಗಳಿಂದ ನರಳಿದವರಲ್ಲ.



ಅವರಿಗೆ ಕರ್ನಾಟಕ ಸರ್ಕಾರ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿತ್ತು. ಅದೇ ಭಾರತ ಸರ್ಕಾರ 2015ರಲ್ಲಿ 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿದೆ. ಅವರ ಭಕ್ತರಿಗೆ ಸ್ವಾಮೀಜಿ ಅವರಿಗೆ 'ಭಾರತ ರತ್ನ' ಪ್ರಶಸ್ತಿ ಬರಬೇಕು ಎನ್ನುವ ಆಸೆಯಿದೆ. ಅದರಲ್ಲಿ ತಪ್ಪೇನಿಲ್ಲ. ಡಾ.ಶಿವಕುಮಾರ ಸ್ವಾಮೀಜಿ ಅವರಿಗೆ ಯಾವುದೇ ಪ್ರಶಸ್ತಿ ಕೊಟ್ಟರು ಅದರ ಮೌಲ್ಯ ಹೆಚ್ಚುತ್ತದೆ ಎಂದಷ್ಟೇ ಹೇಳಬಹುದು. ಇಂತಹ ಮಹಾ ಚೇತನದೊಡನೆ ನನ್ನ ಒಡನಾಟವನ್ನು ನಿಮ್ಮೊಡನೆ ಈ ಸಂಚಿಕೆಯಲ್ಲಿ ಹಂಚಿಕೊಳ್ಳ ಬಯಸುತ್ತೇನೆ.

ನಾನು ತುಮಕೂರಿಗೆ ಬರುವ ಮೊದಲೇ ಸಿದ್ಧಗಂಗೆಯ ಡಾ.ಶಿವಕುಮಾರ ಸ್ವಾಮಿಗಳ ಬಗ್ಗೆ ಕೇಳಿದ್ದೆ. ಸ್ವಾಮೀಜಿ ಅವರ ದಾಸೋಹ ಕಾರ್ಯಕ್ರಮ ನಮ್ಮ ಸುತ್ತಮುತ್ತ ಪ್ರಸಿದ್ಧವಾಗಿತ್ತು. ನಮ್ಮ ಕಡೆಯಿಂದಲೂ ಮಕ್ಕಳು ಇಲ್ಲಿಗೆ ಬಂದು ವಿದ್ಯಾಭ್ಯಾಸ ಪಡೆದಿದ್ದಾರೆ. ನಾನು ಬಿ.ಎಸ್‌ಸಿ. ಓದುತ್ತಿರಬೇಕಾದರೆ ಅವರನ್ನು ಗದಗಿನ ಸಮಾರಂಭವೊಂದರಲ್ಲಿ ನೋಡಿದ್ದೆ. ತುಮಕೂರು ಜಿಲ್ಲಾಸ್ಪತ್ರೆಗೆ ಬಂದ ತರುಣದಲ್ಲಿ ಸಿದ್ಧಗಂಗಾ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಗಂಗಾಧರಯ್ಯ ಅವರ ಮಡದಿಗೆ ಅಪರೇಷನ್ ಮಾಡಿದ್ದೆ. ಅಲ್ಲೇ ಇಂಜಿನಿಯರ್ ಆಗಿದ್ದ ಬಂಗಾರಪ್ಪ ಅವರ ಮಡದಿ ಶೈಲಜ ಅವರಿಗೂ ನಾನೇ ಚಿಕಿತ್ಸೆ ನೀಡಿದ್ದೆ. ಅಲ್ಲಿಂದ ಇವರಿಬ್ಬರೊಡನೆ ನನ್ನ ಸಂಪರ್ಕ ಹೆಚ್ಚಾಯಿತು. ಮುಂದೆ ಬಂಗಾರಪ್ಪ ಅವರು ನಮ್ಮ ನರ್ಸಿಂಗ್ ಹೋಮ್ ಮತ್ತು ಕಾಲೇಜಿನ ಕಟ್ಟಡಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಗಂಗಾಧರಯ್ಯ ಮತ್ತು ಬಂಗಾರಪ್ಪ ಅವರುಗಳು ಸಿದ್ಧಗಂಗಾಮಠಕ್ಕೆ ಆಪ್ತರು. ಮತ್ತೊಬ್ಬರು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ. ಎಂ.ಚಿಕ್ಕಣ್ಣಯ್ಯಪ್ಪ. ಅವರು ಸಹ ನನಗೆ ಬೇಕಾದವರು. ಈ ಮೂವರು ಯಾವುದೋ ಸಮಾರಂಭವೊಂದಕ್ಕೆ ನನ್ನನ್ನು ಸಿದ್ಧಗಂಗಾಮಠಕ್ಕೆ ಕರೆದುಕೊಂಡು ಹೋದರು.

ಪೂಜ್ಯ ಡಾ.ಶಿವಕುಮಾರಸ್ವಾಮೀಜಿ ಅವರನ್ನು ನೋಡಲು ಯಾರಿಂದಲೂ ಪರಿಚಯ ಪತ್ರ ಬೇಕಾಗಿಲ್ಲ. ಅವರೊಬ್ಬ ವಿಶ್ವಮಾನವ ಪ್ರಜ್ಞೆಯುಳ್ಳ ಮಹಾಚೇತನ. ಅವರನ್ನು ನೋಡಿದ ತಕ್ಷಣ ಭಕ್ತಿಭಾವ ಹುಟ್ಟಿ ಬಿಡುತ್ತದೆ. ಡಾ.ಶಿವಕುಮಾರ ಸ್ವಾಮೀಜಿ ನೈಜವಾದ ಸನ್ಯಾಸಧರ್ಮದ ಎಲ್ಲ ಸೂತ್ರಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬಂದವರು.

ಜೊತೆಗೆ 12ನೆಯ ಶತಮಾನದ ಜೀವನಮೌಲ್ಯಗಳಾಗಿದ್ದ ದಾಸೋಹ ಮತ್ತು ಸಮಾಜದ ಎಲ್ಲ ಮಕ್ಕಳಿಗೂ ಶಿಕ್ಷಣ ಸಿಗುವ ಕಾರ್ಯದತ್ತ ದುಡಿಮೆ ಅವರ ಜೀವನ ಧ್ಯೇಯವಾಗಿತ್ತು. ಆಗ ಸ್ವಾಮೀಜಿ ಅವರು ಬಹಳ ಪ್ರೀತಿಯಿಂದ ಮಾತನಾಡಿಸಿದರು.

ಒಮ್ಮೆ ಅವರಿಗೆ 104 ಡಿಗ್ರಿ ಜ್ವರ ಬಂದು ಬಿಟ್ಟಿತ್ತು. ನಾನೇ ಹೋಗಿ ಅವರಿಗೆ ಇಂಜೆಕ್ಷನ್ ಮತ್ತು ಮಾತ್ರೆಗಳನ್ನು ಕೊಟ್ಟೆ. ಮೂರು ನಾಲ್ಕು ದಿನಗಳಲ್ಲಿ ಅವರು ಹುಷಾರು ಆದರು. ಆ ಸಂದರ್ಭದಲ್ಲಿ ಪ್ರತಿದಿನ ಹೋಗಿ ನೋಡುತ್ತಿದ್ದೆ. ನಂತರವೂ ತುರ್ತಿದ್ದಾಗ ನನಗೆ ಕರೆ ಬರುತ್ತಿತ್ತು. ಸ್ವಾಮೀಜಿ ನನ್ನನ್ನು ಹಚ್ಚಿಕೊಂಡರು. ಒಂದು ತಿಂಗಳು ಕಾಣದೇ ಹೋದರೆ ಹೇಳಿ ಕಳುಹಿಸುತ್ತಿದ್ದರು. ಅವರ ಹುಟ್ಟುಹಬ್ಬ ಏಪ್ರಿಲ್ ಒಂದರಂದು ಬರುತ್ತದೆ. ಸಾಮಾನ್ಯವಾಗಿ ಸ್ವಾಮೀಜಿ ಅವರು ಹಿಂದಿನಿಂದಲೂ ತಮ್ಮ ಆಪ್ತರನ್ನು ಮಠಕ್ಕೆ ಆಹ್ವಾನಿಸುತ್ತಿದ್ದರು. ಆ ಸಭೆಗೆ ನನಗೂ ತಪ್ಪದೇ ಆಹ್ವಾನ ಬರುತ್ತಿತ್ತು. ಆ ಸಂದರ್ಭದಲ್ಲಿ ತಾವು ಮಠ ಹಾಗೂ ಶಿಕ್ಷಣಸಂಸ್ಥೆಗಳನ್ನು ಬೆಳೆಸುವಲ್ಲಿ ಅನುಭವಿಸಿದ ಕಷ್ಟಗಳನ್ನು ಹೇಳುತ್ತಿದ್ದರು.

ಡಾ.ಶಿವಕುಮಾರ ಸ್ವಾಮೀಜಿ ಅವರ ವ್ಯಕ್ತಿತ್ವದ ವಿಶೇಷ ಗುಣವೆಂದರೆ ಯಾರು ತಮ್ಮ ಸಂಸ್ಥೆಗೆ ಸಹಾಯ ಮಾಡಿದ್ದರೋ ಅವರನ್ನು ಎಂದೂ ಮರೆತಿರಲಿಲ್ಲ. ಸಕಲೇಶಪುರದ ಯಾವುದೋ ವ್ಯಕ್ತಿ ಅಥವಾ ಹಿರಿಯ ಮಹಿಳೆ ಮಠಕ್ಕೆ ಕೊಟ್ಟ ದಾನವನ್ನು ಅವರು ಕೃತಜ್ಞತೆಯಿಂದ ಸದಾ ನೆನಪು ಮಾಡಿಕೊಳ್ಳುತ್ತಿದ್ದರು. ಅದೇ ರೀತಿ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಪ್ರಸಾದ ಮಾಡುವ ಸಂದರ್ಭದಲ್ಲೂ ಅವರಿಗೆ ಸಹಾಯ ಮಾಡಿದವರನ್ನು ಮರೆಯುತ್ತಿರಲಿಲ್ಲ. ಪೂಜ್ಯ ಸ್ವಾಮೀಜಿ ಅವರಿಗೆ ನಿಶ್ಚಿತ ಅಭಿಪ್ರಾಯವಿತ್ತು. ಅದನ್ನು ಬದಲು ಮಾಡುವುದಕ್ಕೆ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ.

ಡಾ.ಶಿವಕುಮಾರ ಸ್ವಾಮೀಜಿ ಅವರ ವೈಯಕ್ತಿಕ ಜೀವನವೇ ಆದರ್ಶಕ್ಕೆ ಉದಾಹರಣೆಯಾಗಿತ್ತು. ಶಿಸ್ತು ಮತ್ತು ಕರ್ತವ್ಯಪ್ರಜ್ಞೆ ಎರಡು ಅವರ ಜೀವನದಲ್ಲಿ ಸಮಯೋಚಿತವಾಗಿ ಬೆರೆತಿತ್ತು. ಅನೇಕ ವರ್ಷಗಳ ಕಾಲ ಶ್ರಾವಣಮಾಸದ ಪೂಜೆಗೆ ನಮ್ಮ ಮನೆಗೆ ಬಂದಿದ್ದಾರೆ. ಸ್ವಾಮೀಜಿ ಅವರು ಮನೆಗೆ ಬಂದಾಗ ನಮ್ಮ ಮನೆಯ ಮಕ್ಕಳು ಬಸವಣ್ಣ, ಅಕ್ಕಮಹಾದೇವಿ ಮೊದಲಾದ ಶರಣರ ವಚನಗಳನ್ನು ಹಾಡುತ್ತಿದ್ದರು. ಸ್ವಾಮೀಜಿ ಪೂಜೆಯಲ್ಲಿ ಗಡಿಬಿಡಿ ಮಾಡಿದವರಲ್ಲ. ಮಕ್ಕಳನ್ನು ಕರೆದು "ಚೆನ್ನಾಗಿ ಹಾಡಿದೆಯಮ್ಮ. ಅಭ್ಯಾಸ ಮಾಡಿಕೋ. ಮುಂದಿನ ಸಲ ಮತ್ತಷ್ಟು ಹೊಸ ವಚನಗಳನ್ನು ಕಲಿತು ಹಾಡು" ಎನ್ನುತ್ತಿದ್ದರು. ನಾವು ಮಠಕ್ಕೆ ಹೋದಾಗ ಎದುರಿಗೆ ಕುಳಿತಿದ್ದವರಿಗೆ "ನೋಡಿ, ಡಾಕ್ಟರ್ ಮಕ್ಕಳು ಸುಸಂಸ್ಕೃತರು, ವಚನಗಳನ್ನು ಎಷ್ಟು ಚೆನ್ನಾಗಿ ಹಾಡುತ್ತಾರೆ" ಎನ್ನುತ್ತಿದ್ದರು. ನಾನು ಭಕ್ತಿಭಾವದಿಂದ ತಮ್ಮ ಕೃಪೆ ಎನ್ನುತ್ತಿದ್ದೆ.

ಡಾ.ಶಿವಕುಮಾರ ಸ್ವಾಮೀಜಿ ಅವರಿಗೆ ಗುಣವನ್ನು ಮೆಚ್ಚುವ, ಗುರುತಿಸುವ ಔದಾರ್ಯವಿತ್ತು. ಅದಕ್ಕಾಗಿಯೇ ಅವರನ್ನು ನೋಡಿದಾಗೆಲ್ಲ ಮಡದಿ ದುರ್ಗಾ 'ಇವರಿಂದ ಶಿವದೀಕ್ಷೆ ತೆಗೆದುಕೊಳ್ಳಬೇಕು' ಎನ್ನುತ್ತಿದ್ದರು.

ನಮ್ಮ ಶ್ರೀದೇವಿ ನರ್ಸಿಂಗ್ ಹೋಮ್‌ನ ಸಾಂಪ್ರದಾಯಿಕ ಉದ್ಘಾಟನೆಗೂ ಅವರು ಬಂದಿದ್ದಾರೆ. ಶ್ರೀದೇವಿ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಿರ್ಮಾಣವಾಗಿರುವ ಶ್ರೀದುರ್ಗಾಂಬಿಕಾದೇವಿಯ ಆಲಯದ ಭೂಮಿಪೂಜೆ ಅವರಿಂದ ನಡೆದಿತ್ತು. ಇನ್ನು ನಮ್ಮೆಲ್ಲ ಶಿಕ್ಷಣಸಂಸ್ಥೆಗಳಿಗೆ ಶಂಕುಸ್ಥಾಪನೆಯನ್ನು ಮಾಡಿರುವವರು ಡಾ.ಶಿವಕುಮಾರ ಸ್ವಾಮೀಜಿ ಅವರೇ. ನಮ್ಮ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆ ನಡೆಸಿಕೊಟ್ಟಿರುವುದನ್ನು ನಾನೆಂದೂ ಮರೆಯುವುದಿಲ್ಲ. ಸ್ವಾಮೀಜಿ ಅವರನ್ನು ಕರೆದು ಸಮಾರಂಭ ಮಾಡುವುದು ಅಷ್ಟು ಸುಲಭವಲ್ಲ. ನಾವು ಹೇಳಿದ ಸಮಯಕ್ಕೆ ಐದು ನಿಮಿಷ ಮೊದಲೇ ಅವರು ಬಂದುಬಿಟ್ಟಿರುತ್ತಾರೆ. ವೇದಿಕೆಯ ಮೇಲೆ ನಿರ್ಲಿಪ್ತ ಮಹಾಯೋಗಿಯಂತೆ ಕುಳಿತಿದ್ದರೂ ಆಶೀರ್ವಚನದ ಸಂದರ್ಭದಲ್ಲಿ ಎಲ್ಲರೂ ಹೇಳಿದ ಅಭಿಪ್ರಾಯವನ್ನು ಕ್ರೋಡೀಕರಿಸಿ ತಮ್ಮ ಅನಿಸಿಕೆಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತಾರೆ.



ಮೈಸೂರು ಸಂಸ್ಥಾನದ ಆಳಿದ ಮಹಾ ಪ್ರಭುಗಳಾದ ಡಾ.ಜಯಚಾಮರಾಜೇಂದ್ರ ಒಡೆಯರ್ ಜೊತೆ ಸಿದ್ಧಗಂಗಾ ಶ್ರೀಗಳು.

ಡಾ. ಶಿವಕುಮಾರಸ್ವಾಮೀಜಿ ಅವರು ದಿನಾಂಕ 19.1.2019ರಲ್ಲಿ ನಮ್ಮನ್ನು ಬಿಟ್ಟು ಅಗಲಿದರು. ಅವರ ಅಗಲಿಕೆ ನಮ್ಮ ಕುಟುಂಬಕ್ಕೆ ಆದ ಬಹು ದೊಡ್ಡ ನಷ್ಟ. ಅವರ ಸಾವು ತುಮಕೂರು ಜಿಲ್ಲೆಗೆ ಮಾತ್ರವಲ್ಲ, ಇಡೀ ಕರ್ನಾಟಕಕ್ಕೆ ಅವರಂತಹ ಹಿರಿಯ ಚೇತನ ಇಲ್ಲದಿರುವುದು ಬಹುದೊಡ್ಡ ನಷ್ಟವೆನಿಸಿದರೆ ಆಶ್ಚರ್ಯದ ವಿಷಯವಲ್ಲ. ಡಾ.ಶಿವಕುಮಾರ ಸ್ವಾಮಿಗಳಷ್ಟು ಕೆಲಸವನ್ನು ಅಧ್ಯಾತ್ಮ ಮತ್ತು ಲೌಕಿಕ ಜಗತ್ತಿನಲ್ಲಿ ಮಾಡುವ ತುಂಬಾ ಕಷ್ಟ. ಕರ್ನಾಟಕದ ಸಾಂಸ್ಕೃತಿಕ ಮತ್ತು ಅಧ್ಯಾತ್ಮ ಕ್ಷೇತ್ರದಲ್ಲಿ ಅವರಿಗೆ ಹಿರಿದಾದ ಸ್ಥಾನವಿರುತ್ತದೆ. ಅವರು ಕರ್ನಾಟಕಕ್ಕೆ ಒಂದು ದಿವ್ಯ ಪರಂಪರೆಯನ್ನು ಹಾಕಿಕೊಟ್ಟು ಹೋಗಿದ್ದಾರೆ. ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಈ ನಾಡಿನ ಎಲ್ಲಾ ಜನರ ಮೇಲೂ ಇದೆ.

▪ **ನಿರೂಪಣೆ: ಶ್ರೀವತ್ಸ**



ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಜೊತೆ ಡಾ.ಹುಲಿನಾಯ್ಕರ್ ಶ್ರೀಗಳಿಗೆ ಫಲಪುಷ್ಪ ನೀಡಿ ಆಶೀರ್ವಾದ ಪಡೆಯುತ್ತಿರುವುದು.

**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ಅಡುಗೆಗೆ ಯಾವ ಎಣ್ಣೆ ಬಳಸಿದರೆ ಅನುಕೂಲ

ವಿಶೇಷ ಲೇಖನ



ನೇತ್ರಾವತಿ ಡಿ.ಎಂ.
ಆಹಾರ ತಜ್ಞೆ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ,
ಮೊ: 9886514937

ಒಬ್ಬ ಆರೋಗ್ಯಕರ ವ್ಯಕ್ತಿಗೆ ಎಲ್ಲಾ ರೀತಿಯ ಪೋಷಕಾಂಶಗಳು ನಿರ್ದಿಷ್ಟ ಪ್ರಮಾಣಗಳಲ್ಲಿ ಬೇಕು. ಪೋಷಕಾಂಶಗಳನ್ನು ಸ್ಥೂಲ ಮತ್ತು ಸೂಕ್ಷ್ಮ (Macro ಮತ್ತು Micro) ಎಂದು ಎರಡು ರೀತಿಯಲ್ಲಿ ವಿಭಜನೆ ಮಾಡಲಾಗುತ್ತದೆ.



**ಮ್ಯಾಕ್ರೋ ಪೋಷಕಾಂಶ**

ಇದು ಕಾರ್ಬೋಹೈಡ್ರೇಟ್ಸ್, ಪ್ರೋಟೀನ್ ಮತ್ತು ಫ್ಯಾಟ್‌ಗಳನ್ನೊಳಗೊಂಡಿರುತ್ತದೆ. Fat ಕೊಬ್ಬಿನಾಂಶವನ್ನು ನಾವು ಅವಶ್ಯವಾಗಿ ನಮ್ಮ ದಿನನಿತ್ಯದ ಆಹಾರದಲ್ಲಿ ತೆಗೆದುಕೊಳ್ಳಬೇಕು. ಇದರ ಸೇವನೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದರೆ ದೇಹದಲ್ಲಿ ಪೋಷಕಾಂಶದ ಕೊರತೆಯುಂಟಾಗುತ್ತದೆ. ನಮ್ಮ ದೇಹಕ್ಕೆ ಪೋಷಕಾಂಶಗಳು ಸರಿಯಾದ ರೀತಿಯಲ್ಲಿ ದೊರೆಯಬೇಕಾದರೆ ನಾವು ಬಳಸುವ 'ಎಣ್ಣೆ' ಸಹ ಅವಶ್ಯಕ ಪಾತ್ರ ವಹಿಸುತ್ತದೆ.

ಆರೋಗ್ಯಕರ ವ್ಯಕ್ತಿಗೆ ಅವರ ದೇಹದ ಎತ್ತರ ಹಾಗೂ ಶರೀರದ ತೂಕಕ್ಕೆ ಅನುಸಾರವಾಗಿ ಅವಶ್ಯ ಕ್ಯಾಲೋರಿಸ್‌ನಲ್ಲಿ ಶೇಕಡ 20ರಷ್ಟು ಕೊಬ್ಬಿನಾಂಶ ಪಡೆಯ ಬೇಕಾಗುತ್ತದೆ. ಬೆಳೆಯುವ ಮಕ್ಕಳಿಗೆ ಹಾಗೂ ಗರ್ಭಿಣಿ, ಬಾಣಂತಿಗೆ 20–25% ರಷ್ಟು ನೀಡಬಹುದು. ಸ್ಥೂಲಕಾಯ (Obesity) ಮಧುಮೇಹ ಹೃದ್ರೋಗದಂತಹ ಆರೋಗ್ಯ ಸಮಸ್ಯೆ ಇರುವವರು ಇನ್ನೂ ಕಡಿಮೆ ಪ್ರಮಾಣ ಸೇವಿಸಬೇಕಾಗಿರುತ್ತದೆ.

**ಅಡುಗೆ ಎಣ್ಣೆ ಮತ್ತು ಕೊಬ್ಬಿನಾಂಶ**

ಆಯುರ್ವೇದದ ಪ್ರಕಾರ ಎಣ್ಣೆಗೆ ಅದರದೇ ಆದ ಸ್ಥಾನಮಾನವಿದೆ, ಆರೋಗ್ಯದ ಲಾಭದಿಂದಾಗಿ ಭಾರತೀಯರು ಪ್ರತಿನಿತ್ಯ ಅಡುಗೆಗೆ ಎಣ್ಣೆಯನ್ನು ಬಳಸುತ್ತಾರೆ. ಸರಿಯಾದ ರೀತಿಯಲ್ಲಿ ಒಳ್ಳೆಯ ಅಡುಗೆಗೆ ಎಣ್ಣೆಯನ್ನು ಬಳಸುವುದು ತುಂಬ ಅತ್ಯಗತ್ಯ. ಈ ರೀತಿ ಮಾಡುವುದರಲ್ಲಿ ಎಡವಿದರೆ ನಾನಾ ರೀತಿಯ ಆರೋಗ್ಯ ಸಮಸ್ಯೆ ಉಂಟಾಗುತ್ತದೆ ಉದಾಹರಣೆ: ದೇಹದ ತೂಕ ಹೆಚ್ಚುವಿಕೆ, ಸ್ಥೂಲಕಾಯ (Obesity), ಹೃದಯ ಸಂಬಂಧಿಸಿದ ತೊಂದರೆಗಳು, ಮಧುಮೇಹ ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಗಳು ಬರಬಹುದು ನಮ್ಮ ಆರೋಗ್ಯವನ್ನು ಒಂದು ಮಟ್ಟ ಎತ್ತರಕ್ಕೆ ತೆಗೆದುಕೊಂಡು ಹೋಗಬೇಕಾದರೆ ಅವಶ್ಯವಾಗಿ ಉತ್ತಮ ಅಡುಗೆ ಎಣ್ಣೆಯನ್ನು ನಾವು ದಿನನಿತ್ಯ ಬಳಕೆ ಮಾಡಬೇಕು.

**ಹಾಗಾದರೆ ನಾವು ಯಾವ ಅಡುಗೆ ಎಣ್ಣೆಯನ್ನು ಬಳಕೆ ಮಾಡುವುದು ಸೂಕ್ತ?**

ಇತ್ತೀಚಿನ ದಿನಗಳಲ್ಲಿ 90% ಗಿಂತಲು ಹೆಚ್ಚು ಜನ ರಿಫೈಂಡ್ (Refined Oil) ಎಣ್ಣೆಯ ಬಳಕೆಯನ್ನ ಮಾಡುತ್ತಿದ್ದಾರೆ. ನಮಗೆ ಸುಲಭವಾಗಿ ಮಾರ್ಕೇಟ್‌ನಲ್ಲಿ ಸಿಗುವ ಸೂರ್ಯಕಾಂತಿ, ರೈಸ್ ಬ್ರಾನ್, ಕಡಲೇಬೀಜದ ಎಣ್ಣೆಗಳು ರಿಫೈಂಡ್ ರೂಪದಲ್ಲಿದೆ ಅಂದರೆ ಅರ್ಥ ಅವುಗಳೆಲ್ಲ ಕಲಬೆರಕೆಯಾಗಿರುವ ಎಣ್ಣೆಗಳು. ಅವುಗಳಿಂದ ನಮ್ಮ ದೇಹದ ಆರೋಗ್ಯಕ್ಕೆ ಯಾವುದೇ ರೀತಿಯ ಉಪಯೋಗಗಳಿಲ್ಲ. ಬದಲಿಗೆ ಹಾನಿಯೇ ಹೆಚ್ಚು.

**ರಿಫೈಂಡ್ ಆಯಿಲ್ (Refined Oil) ಎಂದರೇನು?**

ಇದರ ಅರ್ಥ ಕಲುಷಿತ ಆಗಿರುವ ಎಣ್ಣೆ ಎಂದು. ಎಣ್ಣೆಯ ಸಂಸ್ಕರಣೆ ಹಲವಾರು ಹಂತಗಳಲ್ಲಿ ಆಗುತ್ತದೆ. ಎಣ್ಣೆಯನ್ನು ಹೊರತೆಗೆಯಲು ಅದನ್ನು 200 ಡಿಗ್ರಿಗಿಂತಲು ಹೆಚ್ಚು ತಾಪಮಾನಕ್ಕೆ ಕಚ್ಚಾ ಎಣ್ಣೆಯನ್ನು ಒಡ್ಡುತ್ತಾರೆ. ಇದರ ಜೊತೆಗೆ Hexane ನಂತಹ ವಿಷಕಾರಿ ಅನಿಲ ಬಳಕೆ ಮಾಡುತ್ತಾರೆ.

ಅತಿಯಾದ ತಾಪದಿಂದಾಗಿ ಎಣ್ಣೆಯಲ್ಲಿರುವಂತಹ ಪೋಷಕಾಂಶಗಳು ಕ್ಷೀಣಿಸುತ್ತವೆ. ಅದರಲ್ಲಿರುವ ಉತ್ತಮ ಕೊಬ್ಬಿನ ಅಂಶ ಕಡಿಮೆಯಾಗುತ್ತದೆ, ಬದಲಿಗೆ ಅನುಪಯುಕ್ತ ಕೊಬ್ಬು ಹೆಚ್ಚಿರುತ್ತದೆ. ಅದು ಆರೋಗ್ಯಕ್ಕೆ ಉತ್ತಮವಲ್ಲ.

ಆನಂತರದ ಹಂತದಲ್ಲಿ ಪುನಃ ಸಂಸ್ಕರಿಸಿ ಎಣ್ಣೆಯ ರುಚಿ ಹಾಗೂ ಪರಿಮಳವನ್ನು ಅಸ್ವಾಭಾವಿಕವಾಗಿ ಮಾಡಲಾಗುತ್ತದೆ. ಎಣ್ಣೆ ಬಹಳ ದಿನ ಕೆಡದ ರೀತಿಯಲ್ಲಿರಲು ಅದಕ್ಕೆ ಆಹಾರ ಸಂರಕ್ಷಕಗಳನ್ನು (Preservatives) ಬಳಕೆ ಮಾಡಲಾಗುತ್ತದೆ (TBHR) ಮತ್ತು ನೊರೆಯನ್ನು ತಡೆಯುವ ರಾಸಾಯನಿಕವನ್ನು (Antifoaming Agents) (DMPS) ಬಳಕೆ ಮಾಡುತ್ತಾರೆ. ಆದರೆ ಇವುಗಳಿಂದ ಆರೋಗ್ಯಕ್ಕೆ ತುಂಬಾ ದುಷ್ಪರಿಣಾಮಗಳು ಉಂಟಾಗುತ್ತದೆ. ಸಂಸ್ಕರಣೆಯಾದ ಕೊನೆಯ ಹಂತದಲ್ಲಿ ಸಿಗುವ ಎಣ್ಣೆ ಬಣ್ಣವಿರದ, ಸುವಾಸೆಯಿರದ ಪೋಷಕಾಂಶ ರಹಿತ ಎಣ್ಣೆಯಾಗಿರುತ್ತದೆ.

**ಹಾಗಾದರೆ ಅಡುಗೆ ತಯಾರಿಸಲು ಯಾವ ಎಣ್ಣೆ ಸೂಕ್ತ?**

ನಮ್ಮ ಸಾಂಪ್ರದಾಯಿಕ ಪದ್ಧತಿಯ ಗಾಣದ ಎಣ್ಣೆಯೇ ಶ್ರೇಷ್ಠ (Cold Pressed or Wood Pressed Oil) ಎಳ್ಳೆಣ್ಣೆ, ಸಾಸಿವೆಎಣ್ಣೆ, ಕಡಲೆಬೀಜದ ಎಣ್ಣೆ, ತೆಂಗಿನಕಾಯಿ ಎಣ್ಣೆ ಸೂಕ್ತವಾದ ಎಣ್ಣೆಗಳು. ಗಾಣದಿಂದ ಎಣ್ಣೆಯನ್ನು ತೆಗೆಯುವಾಗ ಅದರಲ್ಲಿರುವ ಪೋಷಕಾಂಶಗಳ ನಷ್ಟವಾಗುವುದಿಲ್ಲ. ಇದರಲ್ಲಿ ನೈಸರ್ಗಿಕ ಪರಿಮಳ ಮತ್ತು ಬಣ್ಣವಿರುತ್ತದೆ. ಈ ಮೇಲೆ ಕೊಟ್ಟಿರುವಂತಹ ಎಲ್ಲಾ ಎಣ್ಣೆಗಳಿಗೂ Smoking Point ಹೆಚ್ಚಿರುತ್ತದೆ. ಆದ್ದರಿಂದ ಇವುಗಳನ್ನು ತಿಂಡಿ ತಿನಿಸುಗಳನ್ನು ಕರಿಯಲು ಬಳಸಬಹುದು

ಹೊಗೆಯ ಆರಂಭಿಕ ಬಿಂದು (Smoking Point) ಎಂದರೇನು? ಎಣ್ಣೆಯು ಕಾದ ಬಳಿಕ ಅದರಿಂದ ಹೊಗೆ ಬರಲು ಪ್ರಾರಂಭಿಸುತ್ತದೆ. ಇದರ ನಂತರ ಎಣ್ಣೆಯು ಕಲುಷಿತಗೊಳ್ಳಲು ಪ್ರಾರಂಭವಾಗುತ್ತದೆ.

• **ಕೊಬ್ಬರಿ ಎಣ್ಣೆ:** ಈ ಎಣ್ಣೆಯ ಬಗ್ಗೆ ಹೇಳುವುದಾದರೆ ಕೆಲವು ವರ್ಷಗಳ ಹಿಂದೆ ಇದರ ಕುರಿತಾಗಿ ಬಹಳ ವಿವಾದಾತ್ಮಕ ಚರ್ಚೆಗಳು ಕೇಳಿ ಬಂದಿದ್ದವು, ಏನೆಂದರೆ ಇದರಲ್ಲಿ ಸಂತೃಪ್ತ ಕೊಬ್ಬಿನ (Saturated Fatty Acid) ಅಂಶವಿದ್ದು ಅದು ಆರೋಗ್ಯಕ್ಕೆ ಸೂಕ್ತವಲ್ಲ. ಆದರೆ ಆ ನಂತರದ ಸಂಶೋಧನೆಗಳನ್ನು ಪರಿಶೀಲಿಸಿದ ಬಳಿಕ ತಿಳಿದು ಬಂದಿದ್ದೇನೆಂದರೆ ಅದರಲ್ಲಿರುವುದು SFA ಒಂದು Medium Chain Fatty Acid ಅಂಶವಾಗಿದ್ದು, ಅದು ವಿಶೇಷ ರೀತಿಯ ಆರೋಗ್ಯಕರ ಕೊಬ್ಬಿನಾಂಶವಾಗಿರುತ್ತದೆ. ನಮ್ಮ ದೇಶದ ಕೇರಳ, ತಮಿಳುನಾಡು, ದಕ್ಷಿಣ ಕನ್ನಡ (ಕರಾವಳಿ) ಭಾಗಗಳಲ್ಲಿ ತೆಂಗಿನ ಎಣ್ಣೆಯ ಬಳಕೆ ಅತಿ ಹೆಚ್ಚಾಗಿದ್ದು, ಸಂಶೋಧನೆ ಪ್ರಕಾರ ಆ ಪ್ರದೇಶದ ಜನರ ಹೃದಯ ಆರೋಗ್ಯ ಉತ್ತಮವಾಗಿರುತ್ತದೆ.

• **ಸಾಸಿವೆ ಎಣ್ಣೆ:** ಇದರಲ್ಲಿ ಒಮೇಗಾ 3 ಮತ್ತು ಒಮೇಗಾ 6 ಕೊಬ್ಬಿನ ಅಂಶವಿದ್ದು ಹೊಗೆಯ ಆರಂಭಿಕ ಬಿಂದು ಕೂಡ ಬಹಳ ಹೆಚ್ಚಿದೆ ಆದ್ದರಿಂದ ಇದು ಅಡುಗೆಗೆ ಯೋಗ್ಯವಾದದ್ದು.

• **ಆಲಿವ್ ಎಣ್ಣೆ (Olive Oil):** ಇದು ಆರೋಗ್ಯಕ್ಕೆ ಒಳ್ಳೆಯದೇನೋ ಸರಿ, ಆದರೆ ನಮ್ಮ ಭಾರತೀಯ ಅಡುಗೆ ತಯಾರಿಕೆಗೆ ಒಗ್ಗುವ ಎಣ್ಣೆಯಲ್ಲ. ಮತ್ತೊಂದು ಕಾರಣ ಇದರ ದುಬಾರಿ ಬೆಲೆ ಇದ್ದು ಸಲಾಡ್‌ಗಳಿಗೆ ಬಳಸುವುದಕ್ಕೆ ಯೋಗ್ಯವಾಗಿರುತ್ತದೆ.

**ತುಪ್ಪ ಸೇವಿಸುವುದು ಆರೋಗ್ಯಕ್ಕೆ ಒಳ್ಳೆಯದೆ ?**

ತುಪ್ಪದ ಹೊಗೆಯ ಆರಂಭಿಕ ಬಿಂದು ಬಹಳ ಹೆಚ್ಚಿದ್ದು (252 ಡಿಗ್ರಿ) ಇದು ತಿಂಡಿಗಳನ್ನು ಕರಿಯುವುದಕ್ಕೆ ಮತ್ತು ಇನ್ನಿತರ ತಯಾರಿಕೆಗಳಿಗೆ ಯೋಗ್ಯವಿದೆ. ಹೊರ ದೇಶಗಳಲ್ಲಿ Clarified Butter ಎಂದೆ ಪ್ರಸಿದ್ಧಿ ಹೊಂದಿರುವ ತುಪ್ಪ ಬಹಳಷ್ಟು ಬಳಕೆಯಾಗುತ್ತಿದೆ. ಹಾಗಾಗಿ ನಾವು ದೇಸಿ ಹಸುವಿನ ತುಪ್ಪವನ್ನು ನಿರ್ಭಯದಿಂದ ಹಿತ–ಮಿತವಾಗಿ ಬಳಸಬಹುದು.

ಬೇರೆ ಯಾವುದೇ ರೀತಿಯ ಎಣ್ಣೆಗಳನ್ನು ಪುನಃ ಬಳಕೆ ಮಾಡಿದಾಗ ಅದರಲ್ಲಿ Acrolein ಎನ್ನುವ ವಿಷಕಾರಿ ಪದಾರ್ಥವು ಉತ್ಪತ್ತಿಯಾಗಿ ಕ್ಯಾನ್ಸರ್ ಉಂಟು ಮಾಡುವ ಸಾಧ್ಯತೆ ಇದೆ. ಕೊಬ್ಬಿನಾಂಶ ಕೇವಲ ದೇಹದ ಒಳ ಆರೋಗ್ಯಕ್ಕೆ ಮಾತ್ರವಲ್ಲದೆ, ಹೊರ ಆರೋಗ್ಯ ಅಂದರೆ ನಮ್ಮ ದೇಹದ ಚರ್ಮದ ಕಾಂತಿ ಹೆಚ್ಚಿಸಲು, ಕೇಶರಾಶಿಯ ಬೆಳವಣಿಗೆಗೂ ಕೂಡ ತುಂಬಾ ಉಪಯುಕ್ತಕಾರಿಯಾಗಿದೆ. ಇದ್ದಕ್ಕಾಗಿ ಕೊಬ್ಬರಿ ಎಣ್ಣೆ, ಬಾದಾಮಿ ಎಣ್ಣೆ ಬಳಕೆ ಮಾಡಬಹುದು. ಎಣ್ಣೆಯ ಮಹತ್ವವನ್ನು ಅರಿತು ನೈಸರ್ಗಿಕ ಸಂಪನ್ಮೂಲಗಳಲ್ಲಿ ಬೆರೆತು, ಎಷ್ಟು ಅವಶ್ಯಕವೋ ಅಷ್ಟು ಮಾತ್ರ ಬಳಕೆ ಮಾಡಿದರೆ ನಮಗೆ ತುಂಬಾ ಅನುಕೂಲ ಅತಿಯಾದರೆ ಅಮೃತವು ವಿಷವಾಗುತ್ತದೆ. ಆದ್ದುದರಿಂದ ಎಣ್ಣೆಯ ಮಹತ್ವವನ್ನು ಕಡೆಗಣಿಸದೆ, ಹಿತ–ಮಿತವಾಗಿ ಪ್ರತಿನಿತ್ಯ ಬಳಸಿ.

# ಸುಟ್ಟ ಗಾಯಗಳ ವಿಚಾರ



▪ ಡಾ.ವಿನೋದ ಕುಮಾರ್.ಎ.
ಪ್ಲಾಸ್ಟಿಕ್ ಸರ್ಜರಿ ಮತ್ತು ಪುನರ್ನಿರ್ಮಾಣ ಶಸ್ತ್ರಚಿಕಿತ್ಸಕರು
ಹಾಗೂ ನಿವೃತ್ತ ಸರ್ಜನ್ ಲೆಫ್ಟಿನೆಂಟ್ ಕಮಾಂಡರ್
ಭಾರತೀಯ ನೌಕಾಪಡೆ



ಸುಟ್ಟ ಗಾಯಗಳು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿ ಜರುಗುತ್ತಿರುತ್ತವೆ. ಅದು ಚರ್ಮದ ಮೇಲೆ ಹಾಗೂ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತವೆ.

**ಸುಟ್ಟ ಗಾಯಗಳ ಕಾರಣಗಳು:**

1. ಬೆಂಕಿಯಿಂದ
2. ಕರೆಂಟ್ ಶಾಕ್‌ನಿಂದ
3. ರಾಸಾಯನಿಕ ಔಷಧಗಳಿಂದ
4. ಬಿಸಿನೀರು ಎಣ್ಣೆ (ದ್ರವ್ಯಗಳಿಂದ) ಆಗುವ ಸಾಧ್ಯತೆಗಳಿರುತ್ತವೆ.

ಬೆಂಕಿಯಿಂದ ಸುಟ್ಟ ಗಾಯಗಳಾದರೆ ಅದರ ಆಳವನ್ನು ಪರೀಕ್ಷಿಸಿ ಅದ್ದರಿಂದ ಚಿಕಿತ್ಸೆಯನ್ನು ನಿರ್ಧಾರಿಸಲಾಗುವುದು.

1. ಮೊದಲನೇ ಡಿಗ್ರಿ ಸುಟ್ಟ ಗಾಯ
2. ಎರಡನೇ ಡಿಗ್ರಿ ಸುಟ್ಟ ಗಾಯ
3. ಮೂರನೇ ಡಿಗ್ರಿ ಸುಟ್ಟ ಗಾಯ
4. ನಾಲ್ಕನೇ ಡಿಗ್ರಿ ಸುಟ್ಟ ಗಾಯ

**ಮೊದಲನೇ ಡಿಗ್ರಿ ಸುಟ್ಟ ಗಾಯಗಳು:**

ಯಾವುದೇ ತರಹದ ಶಸ್ತ್ರಚಿಕಿತ್ಸೆ ಬೇಕಾಗುವುದಿಲ್ಲ ಈ ಗಾಯವು ಯಾವುದೇ ರೀತಿಯ ಸುಟ್ಟ ಗಾಯದ ಕಲೆಯೇ ಇಲ್ಲದೇ ಪೂರ್ಣವಾಗಿ ಗುಣಮುಖವಾಗುತ್ತದೆ. ಸುಟ್ಟ ಗಾಯವಾದ ತಕ್ಷಣ ಹರಿಯುವ ನೀರಿನಲ್ಲಿ ಹತ್ತು ನಿಮಿಷಗಳ ಕಾಲ ಇಟ್ಟುಕೊಂಡಿರಬೇಕು. ತಕ್ಷಣ ಈ ರೀತಿ ಮಾಡಿದರೆ ಸುಟ್ಟ ಗಾಯದ ನೋವು ಕಡಿಮೆಯಾಗುತ್ತದೆ ಹಾಗೂ ಇನ್ನೂ ಹೆಚ್ಚಾಗಿ ಆಗುವ ಪರಿಣಾಮಗಳು ಕಡಿಮೆಯಾಗುತ್ತದೆ. ಕೆಲವು ಮೂಲಾಮುಗಳ ಮೂಲಕ ಈ ಗಾಯಗಳನ್ನು ಸರಿಪಡಿಸಬಹುದು. ಸುಟ್ಟ ಗಾಯ ಆದಾಗ ಅದರ ಭಾಗದಲ್ಲಿ ಬೊಬ್ಬೆಗಳು ಬಂದರೆ ಅದನ್ನು ಮನೆಯಲ್ಲಿ ಒಡೆದು ಚಿಕಿತ್ಸೆಯನ್ನು ತೆಗೆದುಕೊಳ್ಳಬಾರದು. ಅದನ್ನು ಸ್ವಚ್ಛವಾದ ಬಟ್ಟೆಯಲ್ಲಿ ಸುತ್ತಿಕೊಂಡು ಆಸ್ಪತ್ರೆಯಲ್ಲಿ ವೈದ್ಯರ ಸಲಹೆಯ ಮೇಲೆಗೆ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.

**2, 3, 4 ಡಿಗ್ರಿ ಸುಟ್ಟ ಗಾಯಗಳಾದರೆ** ಅದನ್ನು ಶಸ್ತ್ರಚಿಕಿತ್ಸೆ ಮಾಡಿ ಸರಿಪಡಿಸುವ ಅವಶ್ಯಕತೆ ಇರುತ್ತದೆ. ಅದಕ್ಕೆ ಚಿಕಿತ್ಸೆ ಪಡೆಯದೇ ಹೋದರೆ ದುಷ್ಪರಿಣಾಮಗಳಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಚರ್ಮ ಹಾಗೂ ಮೂಳೆಗಳ ಸೆಳೆತದಿಂದ ಹೆಚ್ಚು ಹೆಚ್ಚು ದುಷ್ಪರಿಣಾಮಗಳು ಉಂಟಾಗುತ್ತದೆ. ಇನ್ನೂ ಹೆಚ್ಚು ಚಿಕಿತ್ಸೆ ಮತ್ತು ಸಲಹೆಗಾಗಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯಲ್ಲಿ ಈ ರೋಗಿಗಳಿಗೆ ಉತ್ತಮ ಚಿಕಿತ್ಸೆ ಸಲಹೆಗಳನ್ನು ನೀಡುತ್ತಾರೆ ಹಾಗೂ ಯಾವುದೇ ರೀತಿಯಲ್ಲಿ ನೀವುಗಳ ತುರ್ತು ಚಿಕಿತ್ಸೆಗೆ ಮುಂದಾಗಬಾರದು ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯುವುದು.



# ಬಡವರ, ದುರ್ಬಲರ ವ್ಯಾಜ್ಯಗಳು ಆರು ತಿಂಗಳಲ್ಲೇ ಇತ್ಯರ್ಥ ಸಿವಿಲ್ ಪ್ರಕ್ರಿಯಾ ಸಂಹಿತೆ ತಿದ್ದುಪಡಿ ಕಾಯ್ದೆ ಅಧಿಸೂಚನೆ ಪ್ರಕಟ

ನ್ಯಾಯಾಲಯಗಳಲ್ಲಿನ ವ್ಯಾಜ್ಯಗಳೆಂದರೆ ಬಡವರು, ಸಣ್ಣ-ಪುಟ್ಟ ರೈತರು ಮತ್ತು ದುರ್ಬಲ ವರ್ಗದವರು ಜೀವನವಿಡೀ ಪರಿತಪಿಸುವ ದಿನಗಳಿದ್ದವು. ಆದರೆ ಇನ್ನು ಮುಂದೆ ಆರ್ಥಿಕವಾಗಿ ದುರ್ಬಲರಾದವರ ಸಿವಿಲ್ ವ್ಯಾಜ್ಯಗಳನ್ನು ಕೇವಲ ಆರು ತಿಂಗಳಲ್ಲಿ ಪೂರ್ಣಗೊಳಿಸುವ ಕರ್ನಾಟಕ ಸಿವಿಲ್ ಪ್ರಕ್ರಿಯಾ ಸಂಹಿತೆ ತಿದ್ದುಪಡಿ ಕಾಯ್ದೆ ಜಾರಿಗೊಳಿಸಿ ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿದೆ.

ಕಳೆದ ವರ್ಷ ಜುಲೈ 19ರಂದು ವಿಧಾನಸಭೆ ಹಾಗೂ ಜು.20ರಂದು ವಿಧಾನ ಪರಿಷತ್‌ನಲ್ಲಿ ಅಂಗೀಕಾರಗೊಂಡಿದ್ದ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕಕ್ಕೆ 2024ರ ಫೆ.18ರಂದು ರಾಷ್ಟ್ರಪತಿಗಳು ಅಂಗೀಕಾರ ನೀಡಿದ್ದಾರೆ. ಈ ಕುರಿತು ಕೇಂದ್ರ ಗೃಹ ಇಲಾಖೆ ಫೆ.21ಕ್ಕೆ ರಾಜ್ಯ ಸರಕಾರಕ್ಕೆ ಮಾಹಿತಿ ನೀಡಿದೆ. ಈ ವಿಧೇಯಕದಡಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಉಪಬಂಧಗಳನ್ನು ತಿದ್ದುಪಡಿ ಮಾಡಲಾಗಿದೆ.

ರಾಜ್ಯದಲ್ಲಿರುವ ಬಡವರು, ಸಣ್ಣ ಮತ್ತು ಅತಿ ಸಣ್ಣ ರೈತರು ಮತ್ತು ದುರ್ಬಲ ವರ್ಗದವರು ಆರ್ಥಿಕವಾಗಿ ಹಿಂದುಳಿದವರ್ಗದವರು ನ್ಯಾಯಾಲಯಗಳಲ್ಲಿ ದೀರ್ಘ ಕಾಲದವರೆಗೆ ಪ್ರಕರಣಗಳನ್ನು ನಿರ್ವಹಿಸಲು ಅಸಾಧ್ಯವಾದ ಪರಿಸ್ಥಿತಿಯನ್ನು ನಿಭಾಯಿಸಲು ಆದ್ಯತೆಯ ಮೇಲೆ ಪ್ರಕರಣಗಳ ವಿಚಾರಣೆ, ಸುನಾವಣೆ ಮತ್ತು ವಿಲೇವಾರಿಗೆ ಸೂಕ್ತವಾದ ವ್ಯವಸ್ಥೆ ರೂಪಿಸಲು ಈ ಕಾಯ್ದೆ ನೆರವಾಗಲಿದೆ. ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ದೀರ್ಘಕಾಲಿಕ ವ್ಯಾಜ್ಯಗಳನ್ನು ಎದುರಿಸುತ್ತಿರುವ ಪ್ರಕರಣಗಳನ್ನು ಗುರುತಿಸಿ, ಅಂತಹ ಪ್ರಕರಣಗಳಿಗೆ ಸೂಕ್ತ ಕಾಲಾವಧಿ ಗೊತ್ತುಪಡಿಸಿ ಶೀಘ್ರ ಮತ್ತು ನಿಗದಿತ ಅವಧಿಯಲ್ಲಿ ನ್ಯಾಯದೊಂದಿಗೆ ಕಾರ್ಯಕ್ಷಮತೆಯ ಮೇಲೆ ವಿಲೇವಾರಿ ಮಾಡಲು ಈ ಕಾಯ್ದೆ ನೆರವಾಗಲಿದೆ.




ರಾಜ್ಯ ಸಿವಿಲ್ ನ್ಯಾಯಾಲಯಗಳು ಹಾಗೂ ಹೈಕೋರ್ಟ್‌ನಲ್ಲಿ ದೀರ್ಘಕಾಲದಿಂದ ಬಾಕಿ ಉಳಿದಿರುವ ಸಿವಿಲ್ ವ್ಯಾಜ್ಯಗಳಿಗೆ ಈ ಕಾಯ್ದೆ ಅನ್ವಯ ಆಗಲಿದೆ. ರಾಜ್ಯ ಸರಕಾರ ಗುರುತಿಸಲಾದ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮತ್ತು ಸರಕಾರ ಘೋಷಿಸಿದ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬದ ಕಕ್ಷಿದಾರರಿಗೆ ಇದರಿಂದ ಸಾಕಷ್ಟು ಅನುಕೂಲವಾಗಲಿದೆ.

ಈ ಕಾನೂನು ಕೆಳ ಹಂತದ ನ್ಯಾಯಾಲಯದಿಂದ ಹಿಡಿದು ಹೈಕೋರ್ಟ್ ತನಕದ ಪ್ರಕರಣಗಳವರೆಗೂ ಅನ್ವಯವಾಗುತ್ತದೆ. ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಇಂತಹ ವರ್ಗಕ್ಕೆ ಸೇರಿದವರ ಪ್ರಕರಣಗಳು 5 ವರ್ಷದಿಂದ 10 ವರ್ಷದವರೆಗೂ ಹೆಚ್ಚು ಸಮಯ ಇತ್ಯರ್ಥವಾಗದೆ ಉಳಿದಿದೆ. ಸಕಾಲದಲ್ಲಿ ನ್ಯಾಯದಾನ ಮಾಡದೇ ಹೋದರೆ ನ್ಯಾಯ ಬಯಸುವವರಿಗೆ ದ್ರೋಹ ಮಾಡಿದಂತೆ ಎಂದು ಸರ್ಕಾರ ಭಾವಿಸಿದೆ. ಅದಕ್ಕಾಗಿ ತಿದ್ದುಪಡಿ ತರಲಾಗಿದೆ.

ಈ ಮಸೂದೆಗೆ 2023ರ ಜುಲೈನಲ್ಲಿ ತಿದ್ದುಪಡಿ ತರಲಾಯಿತು. ಅದಕ್ಕೆ ರಾಷ್ಟ್ರಪತಿಗಳ ಒಪ್ಪಿಗೆ ಸಹ ಪಡೆಯಲಾಗಿದೆ. ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ತಿದ್ದುಪಡಿಯ ಅನುಷ್ಠಾನಕ್ಕೆ ಅಗತ್ಯವಿರುವ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

### ಯಾರು ಅರ್ಹರು?

- ಎರಡು ಹೆಕ್ಟೇರು ಒಣ ಬೇಸಾಯದ ಭೂಮಿ ಹೊಂದಿರುವವರು.
- ಒಂದು ಮತ್ತು ನಾಲ್ಕನೇ ಒಂದು ಹೆಕ್ಟೇರ್‌ನಷ್ಟು ಮಳೆಯಾಶ್ರಿತ ಭೂಮಿ ಹೊಂದಿರುವವರು.
- ಒಂದು ನೀರಾವರಿ ಬೆಳೆ ಬೆಳೆಯಲು ಅಥವಾ ತೋಟದ ಬೆಳೆಗಳನ್ನು ಬೆಳೆಯಲು ಅಥವಾ ದ್ರಾಕ್ಷಿ ಅಥವಾ ತೆಂಗು ಅಥವಾ ಅಡಿಕೆ ಅಥವಾ ಕಬ್ಬು ಬೆಳೆಯಲು ಅಥವಾ ನೀರಾವರಿ ಮೂಲಕ ರೇಷ್ಮೆ ಬೆಳೆಯಲು ಅರ್ಧ ಹೆಕ್ಟೇರ್ ಭೂಮಿ ಇರುವವರು.
- ದೀರ್ಘಕಾಲಿನ ನೀರಾವರಿ ಸೌಲಭ್ಯ ಹೊಂದಿರುವ ಅಥವಾ ವರ್ಷದಲ್ಲಿ ಒಂದಕ್ಕಿಂತ ಹೆಚ್ಚಿನ ನೀರಾವರಿ ಬೆಳೆಗಳನ್ನು ಬೆಳೆಯುವ ಸೌಲಭ್ಯಗಳಿರುವ ಕಾಲು ಹೆಕ್ಟೇರ್ ಭೂಮಿ ಹೊಂದಿರುವವರು.(ತೋಟದ ಬೆಳೆಗಳು ಎಂದರೆ ಏಲಕ್ಕಿ, ಕಾಫಿ, ರಬ್ಬರ್ ಮತ್ತು ಚಹಾ)
- ಆರ್ಥಿಕ ದುರ್ಬಲ ವರ್ಗಕ್ಕೆ ಸೇರಿದ ವ್ಯಕ್ತಿ ಎಂದರೆ ಎಲ್ಲಾ ಮೂಲಗಳಿಂದ ವ್ಯಕ್ತಿಯ ವಾರ್ಷಿಕ ಆದಾಯ 3 ಲಕ್ಷಕ್ಕೆ ಮೀರದ ವ್ಯಕ್ತಿಯಾಗಿರಬೇಕು.

(ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹ)



"ಜನಸಾಮಾನ್ಯರ ಬಾಗಿಲಿಗೆ ನ್ಯಾಯದಾನ ಆಗಬೇಕು ಎಂಬ ಸಂವಿಧಾನದ ಆಶಯಕ್ಕೆ ಒಳಪಟ್ಟು ರಾಜ್ಯದ ಆಧಾರಸ್ತಂಭವಾಗಿರುವ ರೈತ ಕುಟುಂಬಗಳ ಹಿತ ಕಾಯುವ ನಿಟ್ಟಿನಲ್ಲಿ ಕ್ರಾಂತಿಕಾರಕ ಕಾನೂನು ಬದಲಾವಣೆಯನ್ನು ತರುವಲ್ಲಿ ಸರಕಾರ ಯಶಸ್ವಿಯಾಗಿದೆ. ಶತಮಾನಗಳ ಕಾಲದ ಹಳೆಯ ನಿಯಮಗಳನ್ನು ಸಡಿಲಿಸಿ, ಆರ್ಥಿಕ ದುರ್ಬಲರ ಸಿವಿಲ್ ವ್ಯಾಜ್ಯಗಳ ತ್ವರಿತ ವಿಲೇವಾರಿ ಈ ಕಾಯ್ದೆಯಿಂದ ಸಾಧ್ಯವಾಗಲಿದೆ."

**ಎಚ್ ಕೆ ಪಾಟೀಲ್**
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ

---

# ಪ್ರಥಮ ವರ್ಷದ ಎಂ.ಬಿ.ಎ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ

## ಎಂ.ಬಿ.ಎ.ಪದವೀಧರರಿಗೆ ಉದ್ಯೋಗ ವಲಯದಲ್ಲಿ ಹೆಚ್ಚು ಅವಕಾಶ

"ಇತ್ತೀಚಿನ ದಿನಗಳಲ್ಲಿ ಎಂ.ಬಿ.ಎ. ಪದವೀಧರರಿಗೆ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿದೆ. ಎಂ.ಬಿ.ಎ. ವಿದ್ಯಾರ್ಥಿಗಳು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗುವುದರೊಂದಿಗೆ ಉತ್ತಮ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಕೊಡುವ ಪ್ರೋತ್ಸಾಹವೇ ಯಶಸ್ಸಿನ ಮೆಟ್ಟಿಲು. ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಎಂ.ಬಿ.ಎ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಇಲ್ಲಿನ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಉತ್ತಮ ಬೋಧಕರು, ಶ್ರೇಷ್ಠ ಗ್ರಂಥಾಲಯ ಮತ್ತು ವೃತ್ತಿಯಲ್ಲಿ ಯಶಸ್ಸು ಸಾಧಿಸಿದ ತಜ್ಞರೊಂದಿಗೆ ವಿಚಾರವಿನಿಮಯ ಮೊದಲಾದ ಸೌಲಭ್ಯಗಳು ಇಲ್ಲಿ ದೊರೆಯುತ್ತದೆ" ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ನಗರದ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಎಂ.ಬಿ.ಎ. ವಿಭಾಗದ ವತಿಯಿಂದ ಪ್ರಥಮ ವರ್ಷದ ಎಂ.ಬಿ.ಎ. ತರಗತಿಗಳ ಉದ್ಘಾಟನಾ ಸಮಾರಂಭವನ್ನು ಮಾರ್ಚ್ 04 ರಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆಡಿಟೋರಿಯಂ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಬೆಂಗಳೂರಿನ ರಿನೆಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ವ್ಯಾಪಾರ ಅಭಿವೃದ್ಧಿ ಅಧಿಕಾರಿಯಾದ ನೂತನ್ ಕಂಬದಲ್ ಅವರು "ವಿದ್ಯಾರ್ಥಿಗಳಲ್ಲಿ ಕಠಿಣ ಪರಿಶ್ರಮ, ಶ್ರದ್ಧೆಯಿದ್ದರೆ ಯಶಸ್ಸು ಖಂಡಿತ. ಪ್ರತಿಯೊಬ್ಬರೂ ಆದರ್ಶ ವ್ಯಕ್ತಿಗಳಾಗಬೇಕು, ವಿದ್ಯಾರ್ಥಿಗಳು ಪ್ರತಿಯೊಂದು ಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳಬೇಕು" ಎಂದರು.




ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಎಂ.ಬಿ.ಎ. ವಿಭಾಗದ ವತಿಯಿಂದ ಪ್ರಥಮ ವರ್ಷದ ಎಂ.ಬಿ.ಎ. ತರಗತಿಗಳ ಉದ್ಘಾಟನಾ ಸಮಾರಂಭ. ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಮುಖ್ಯಅತಿಥಿಗಳಾದ ನೂತನ್ ಕಂಬದಲ್, ಪಿ.ಪ್ರವೀಣ್‌ಕುಮಾರ್, ಧನುಷ್, ಎಂ.ಎಸ್.ಪಾಟೀಲ್, ಡಾ.ಲಾವಣ್ಯ, ಡಾ.ನರೇಂದ್ರವಿಶ್ವನಾಥ್, ಟಿ.ವಿ.ಬ್ರಹ್ಮದೇವಯ್ಯ, ಡಾ.ಕೆ.ಎಸ್.ರಾಮಕೃಷ್ಣ ಹಾಗೂ ಡಾ.ಬಿ.ಎನ್.ಪ್ರತಾಪ್, ಪ್ರೊ.ಪ್ರವೀಣ್ ಕುಮಾರ್, ಡಾ.ಗ್ರೇಸ್ ಹೇಮಲತಾ, ಪ್ರೊ.ಆರ್.ಬಿಂದು ಮತ್ತು ಪ್ರೊ.ಎಸ್.ದಿವ್ಯಾ.

ತುಮಕೂರಿನ ಮಹಾವೀರ ಕೋಕೋನಟ್ ಇಂಡಸ್ಟ್ರೀಸ್‌ನ ಮಾಲೀಕರು ಮತ್ತು ಚಾರ್ಟರ್ಡ್ ಅಕೌಂಟೆಂಟ್ ಹಾಗೂ ರೋಟರಿಯನ್ ಪಿ.ಪ್ರವೀಣ್‌ಕುಮಾರ್‌ರವರು ಮಾತನಾಡುತ್ತಾ "ಶ್ರೀದೇವಿ ಸಂಸ್ಥೆಯಲ್ಲಿ ಉತ್ತಮ ಶಿಕ್ಷಣದ ಸೌಲಭ್ಯಗಳು ವಿಫುಲವಾಗಿವೆ. ಅವುಗಳನ್ನು ಸದುಪಯೋಗ ಪಡಿಸಿಕೊಂಡು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಪೋಷಕರಿಗೂ ವಿದ್ಯಾಸಂಸ್ಥೆಗೂ ಒಳ್ಳೆಯ ಹೆಸರು ಬರುವಂತೆ ಮಾಡಬೇಕು. ಎಂ.ಬಿ.ಎ. ಕೋರ್ಸ್‌ನ ಆಧುನಿಕ ಜಗತ್ತಿನಲ್ಲಿ ಮಹತ್ವವಿದೆ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಅದನ್ನು ಆತ್ಮಶಕ್ತಿ ಹಾಗೂ ಶ್ರದ್ಧೆ ಎದುರಿಸಬೇಕು. ವಿದ್ಯಾರ್ಥಿಗಳು ಆಯ್ದ ಚೌಕಟ್ಟಿನ ಒಳಗೆ ಯೋಚಿಸುವುದನ್ನು ಬಿಟ್ಟು, ವಿಶಾಲ ಜಗತ್ತನ್ನು ಆಯ್ಕೆ ಮಾಡಿಕೊಳ್ಳಬೇಕು" ಎಂದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ "ವಿದ್ಯಾರ್ಥಿಗಳು ಉಜ್ವಲ ಭವಿಷ್ಯವನ್ನು ರೂಪಿಸಲು ಏನಾದರೂ ಸಾಧಿಸಬೇಕು, ನಮ್ಮ ಸಂಸ್ಥೆಯಲ್ಲಿ ಎಂ.ಬಿ.ಎ. ಪದವಿ ಪಡೆದ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ತಮ್ಮ ಪ್ರತಿಯೊಂದು ಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳಬೇಕು" ಎಂದರು. ಇದೇ ಸಂದರ್ಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರ ನೀಡಿ ಗೌರವಿಸಲಾಯಿತು.

ಮುಖ್ಯಅತಿಥಿಗಳಾಗಿ ಧನುಷ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್.ರಾಮಕೃಷ್ಣ ಹಾಗೂ ಡಾ.ಬಿ.ಎನ್.ಪ್ರತಾಪ್, ಪ್ರೊ.ಪ್ರವೀಣ್ ಕುಮಾರ್, ಡಾ.ಗ್ರೇಸ್ ಹೇಮಲತಾ, ಪ್ರೊ.ಆರ್.ಬಿಂದು, ಪ್ರೊ. ಎಸ್.ದಿವ್ಯಾ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹುಟ್ಟಿದ ಪ್ರತಿ ಮಗುವೂ ಮೊದಲ ದಿನದಿಂದಲೇ 25 ಸಿಗರೇಟ್ ಸೇದುತ್ತಿದೆ!

ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿ ಪ್ರತಿ ಮಗುವೂ ಹುಟ್ಟಿದ ಮೊದಲ ದಿನದಿಂದಲೇ ದಿನಕ್ಕೆ 25 ಸಿಗರೇಟುಗಳನ್ನು ಸೇದುತ್ತಿದೆ! ಇದೇನಿದು ಎಂದು ಗಾಬರಿಯೇ?! ಹೌದು. ಇದು ದೆಹಲಿಯಲ್ಲಿ 30 ವರ್ಷಗಳಿಂದ ಎದೆ ರೋಗಗಳ ಶಸ್ತ್ರಚಿಕಿತ್ಸಕರಾಗಿ (ಚೆಸ್ಟ್ ಸರ್ಜನ್) ಆಗಿ ಕಾರ್ಯನಿರತರಾಗಿರುವ ಡಾಕ್ಟರ್ ಅರವಿಂದ್ ಕುಮಾರ್ ಅವರ ಮಾತು.

ಡಾ.ಅರವಿಂದ್ ಅವರ ಪ್ರಕಾರ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಎಷ್ಟು ಹದಗಟ್ಟಿದೆ ಎಂದರೆ ಅಲ್ಲಿನ ಉಸಿರಾಡುವ ಗಾಳಿಯೇ ಸಿಗರೇಟು ಸೇವನೆಯಷ್ಟು ದುಷ್ಪರಿಣಾಮ ಉಂಟುಮಾಡುತ್ತಿದೆ. ದಿನದ 24 ಗಂಟೆಗಳಲ್ಲಿ ಉಸಿರಾಡುವ ಗಾಳಿ ಮೂಲಕವೇ 25 ಸಿಗರೇಟುಗಳನ್ನು ಸೇರಿದರೆ ಎಷ್ಟು ಕೆಟ್ಟ ಪರಿಣಾಮವಾಗುತ್ತದೋ ಆ ಮಟ್ಟಿಗಿನ ಕೆಟ್ಟ ಪರಿಣಾಮವಾಗುತ್ತಿದೆ.

ಅಷ್ಟೇ ಅಲ್ಲ. ಅವರು ಹೇಳುವ ಮತ್ತೊಂದು ಮಾತು ಇನಷ್ಟು ದಿಗಿಲು ಹುಟ್ಟಿಸುವಂತಿದೆ. "ಮನುಷ್ಯರಲ್ಲಿನ ಶ್ವಾಸಕೋಶದ ಬಣ್ಣವೇ ಇತ್ತೀಚೆಗೆ ಬದಲಾಗಿದೆಯಂತೆ! "30 ವರ್ಷಗಳಿಂದ ನಾನು ದೆಹಲಿಯಲ್ಲಿ ಚೆಸ್ಟ್ ಸರ್ಜನ್ ಆಗಿ ಪ್ರಾಕ್ಟೀಸ್ ಮಾಡುತ್ತಿದ್ದೇನೆ. ವೃತ್ತಿ ಆರಂಭಿಸಿದ ದಿನಗಳಲ್ಲಿ ನಾನು ನೋಡುತ್ತಿದ್ದ ಶ್ವಾಸಕೋಶ ನಸುಗೆಂಪು ಬಣ್ಣದಲ್ಲಿ ಇರುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ನಾನು ಹೆಚ್ಚು ಕಡಿಮೆ ಈ ನಸುಗೆಂಪು ಬಣ್ಣದ ಶ್ವಾಸಕೋಶವನ್ನು ನೋಡಿಯೇ ಇಲ್ಲ. ನಾನು ಈಗ ನೋಡುವ ಶ್ವಾಸಕೋಶ ಬಹುಮಟ್ಟಿಗೆ ಕಪ್ಪು ಬಣ್ಣದಲ್ಲಿ ಇರುತ್ತದೆ" ಎನ್ನುತ್ತಾರೆ ಡಾ.ಅರವಿಂದ.



ದೆಹಲಿಯಲ್ಲಿ ಉಸಿರಾಡುವ ಗಾಳಿಯಲ್ಲಿ ಮಾಲಿನ್ಯ ಕಾರಕಗಳ ಪ್ರಮಾಣ ಅತ್ಯಂತ ಹೆಚ್ಚಾಗಿರುವುದೇ ಇದಕ್ಕೆ ಕಾರಣ. ಇದರಿಂದ ಶ್ವಾಸಕೋಶದ ಬಣ್ಣವೇ ಬದಲಾಗಿ ಹೋಗಿದೆ ಎಂಬುದು ಅವರ ವಿವರಣೆ. ಗಾಳಿಯಲ್ಲಿನ ಮಾಲಿನ್ಯದ ಕಣಗಳು ಒಂದು ಮಟ್ಟವನ್ನು ಮೀರಿದರೆ ಉಸಿರಾಡುವ ಗಾಳಿಯೇ ಕ್ಯಾನ್ಸರ್ ಕಾರಕವಾಗುತ್ತದೆ ಎಂಬುದನ್ನು ವಿಶ್ವ ಆರೋಗ್ಯ ಸಂಸ್ಥೆ ಕೂಡ ಒಪ್ಪಿಕೊಂಡಿದೆ ಎಂಬ ಅಂಶವನ್ನು ಇದೇ ಸಂದರ್ಭದಲ್ಲಿ ಅವರು ನೆನಪಿಸಿದ್ದಾರೆ.

ಮುಂಚೆ ಶ್ವಾಸಕೋಶದ ಕ್ಯಾನ್ಸರ್ ಹೆಚ್ಚಾಗಿ 60 ಅಥವಾ ಅದಕ್ಕಿಂತ ಜಾಸ್ತಿ ವಯಸ್ಸಾದವರಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆದರೆ, ಇತ್ತೀಚಿನ ವರ್ಗಗಳಲ್ಲಿ 40 ವಯಸ್ಸಿನವರಿಗೆ ಈ ಬಾಧೆ ಕಂಡುಬರುತ್ತಿದೆ. ತಮ್ಮ ಒಬ್ಬ ರೋಗಿಗಂತೂ 28 ವರ್ಷಕ್ಕೇ ಇದು ಕಾಣಿಸಿಕೊಂಡಿದೆ ಎಂಬುದರ ಬಗ್ಗೆ ಅವರು ಗಮನ ಸೆಳೆದಿದ್ದಾರೆ.

ಹೀಗೆ ಚಿಕ್ಕ ವಯಸ್ಸಿನಲ್ಲೇ ಶ್ವಾಸಕೋಶದ ಕ್ಯಾನ್ಸರ್ ಕಂಡುಬರುವುದಕ್ಕೆ ನಿರ್ದಿಷ್ಟ ಕಾರಣವಿದೆ. ಅದೇನೆಂದರೆ, ಒಬ್ಬ ವ್ಯಕ್ತಿಯಲ್ಲಿನ ಶ್ವಾಸಕೋಶದ ಜೀವಕೋಶಗಳು ತಮ್ಮ ಮೂಲಸತ್ವ ಕಳೆದುಕೊಂಡು ಕ್ಯಾನ್ಸರ್‌ಕಾರಕ ಜೀವಕೋಶಗಳಾಗಿ ಬದಲಾಗಲು ಸುಮಾರು 30 ವರ್ಷಗಳ ಅವಧಿ ಹಿಡಿಯುತ್ತದೆ. ಮುಂಚೆ, ವ್ಯಕ್ತಿಯೊಬ್ಬ ತನ್ನ 25ನೇ ವಯಸ್ಸಿನಲ್ಲಿ ಸಿಗರೇಟು ವ್ಯಸನ ಆರಂಭಿಸಿದರೆ ಆತನ ಶ್ವಾಸಕೋಶದ ಜೀವಕೋಶಗಳು ಕ್ಯಾನ್ಸರ್ ಕಾರಕವಾಗುವಷ್ಟರಲ್ಲಿ ಅವನಿಗೆ ಕನಿಷ್ಠ 55 ವರ್ಷಗಳಾದರೂ ಆಗಿರುತ್ತಿತ್ತು.

▶▶ 7ನೇ ಪುಟಕ್ಕೆ...

## ಅಂತರರಾಷ್ಟ್ರೀಯ ವಿಶ್ವ ಮಹಿಳಾ ದಿನಾಚರಣೆ

# ಮಹಿಳೆಯರು ಆರ್ಥಿಕ ಸದೃಢರಾಗಲು ಅಗತ್ಯ

"ದೇಶದ ಆರ್ಥಿಕ ಪ್ರಗತಿ ಮತ್ತು ಸ್ವಾವಲಂಬನೆಯಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾದದ್ದು, ಮಹಿಳಾ ದಿನಾಚರಣೆ ಎಂಬುದು ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗಿರಬಾರದು, ಪ್ರತಿದಿನವು ಮಹಿಳಾ ದಿನಾಚರಣೆಯನ್ನು ಆಚರಿಸಬೇಕು, ಪ್ರಸ್ತುತ ಭಾರತದಲ್ಲಿ ಕುಟುಂಬದಿಂದ ಹಿಡಿದು ರಾಷ್ಟ್ರಪತಿಯವರೆಗೂ ಮಹಿಳೆಯರು ವಹಿಸುತ್ತಿರುವ ಪಾತ್ರ ಅತ್ಯಮೂಲ್ಯವಾಗಿದೆ. ಜನಸಂಖ್ಯೆಯ ದೃಷ್ಟಿಯಿಂದ ಅರ್ಧದಷ್ಟಿರುವ ಮಹಿಳೆಯರು ಕ್ರಿಯಾಶೀಲರಾಗುವ ಅಗತ್ಯವಿದೆ. ಮಹಿಳೆಯರು ಮುಂದಿನ ಸಮೃದ್ಧ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಅವರು ವಿಶಾಲ ದೃಷ್ಟಿ ಬೆಳಸಿಕೊಂಡು, ತಮ್ಮ ಹಕ್ಕುಗಳಾಗಿ ಹೋರಾಟ ಮಾಡಬೇಕು. ಎಲ್ಲಾ ವರ್ಗದ ಜನರು ಸ್ತ್ರೀಯರನ್ನು ಪ್ರೀತಿಸಬೇಕು ಹಾಗೂ ಗೌರವಿಸಬೇಕು. ಸ್ತ್ರೀಯರನ್ನು ನಮ್ಮ ಸಮಾಜ ಪೂಜನೀಯ ಸ್ಥಾನದಿಂದ ನೋಡುತ್ತಿದೆ. ಯುವತಿಯರು ತಮ್ಮ ಶೈಕ್ಷಣಿಕ ಅವಧಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು, ಗಂಭೀರವಾದ ಅಧ್ಯಯನ ಮಾಡಿದರೆ, ಖಂಡಿತ ಒಳ್ಳೆಯ ಪ್ರತಿಫಲ ದೊರೆಯುತ್ತದೆ. ಉನ್ನತ ಸ್ಥಾನದಲ್ಲಿರುವ ಮಹಿಳೆಯರು ಸಮಾಜಮುಖಿಯಾಗಿ ಕೆಲಸ ಮಾಡಬೇಕು" ಎಂದು ತುಮಕೂರು ಮಹಾನಗರ ಪಾಲಿಕೆಯ ಆಯುಕ್ತರಾದ ಬಿ.ವಿ.ಅಶ್ವಿಜ ಅವರು ತಿಳಿಸಿದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಮಾರ್ಚ್ 14ರಂದು 'ಅಂತರಾಷ್ಟ್ರೀಯ ವಿಶ್ವ ಮಹಿಳಾ ದಿನಾಚರಣೆ'ಯನ್ನು ಶ್ರೀದೇವಿ ಆಸ್ಪತ್ರೆಯ ಆಡಿಟೋರಿಯಂ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ತುಮಕೂರು ಮಹಾನಗರ ಪಾಲಿಕೆ ಆಯುಕ್ತರಾದ ಬಿ.ವಿ. ಆಶ್ವಿಜ ಅವರು ಉದ್ಘಾಟಿಸಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್‌ರವರು "ಮಹಿಳೆಯರು ಕುಟುಂಬ ಮತ್ತು ಸಮಾಜದ ಕೇಂದ್ರ ಬಿಂದು, ಮಹಿಳೆ ವಿದ್ಯಾವಂತರಾದರೆ ಒಟ್ಟು ಕುಟುಂಬ ವಿದ್ಯಾವಂತರಾಗುತ್ತಾರೆ, ನಮ್ಮ ದೇಶ ಮಾತೃಪ್ರಧಾನವಾದ ದೇಶವಾಗಿದೆ. ಸ್ತ್ರೀಯರಿಗೆ ವಿಶೇಷ ಪ್ರಾಮುಖ್ಯತೆ ನೀಡಿರುವ ದೇಶವಾಗಿದೆ. ಕುಟುಂಬದ ಏಳಿಗೆಯಲ್ಲಿ ಮಹಿಳೆ ಮುಂಚೂಣಿ ಪಾತ್ರ ವಹಿಸುತ್ತಾರೆ. ರಾಜಕಾರಣದಲ್ಲೂ ಅವರದು ಪ್ರಮುಖವಾದ ಪಾತ್ರ ಸಮಾಜದಲ್ಲಿ ಚೈತ್ಯನ್ಯಶೀಲರಾಗಿರುವ ಮಹಿಳೆ ಸಂಘಟಿತರಾಗಿ ಆರ್ಥಿಕ ಮತ್ತು ಸಾಮಾಜಿಕ ಸದೃಢತೆ ಸಾಧಿಸಬೇಕು" ಎಂದರು.

ಇದೇ ಸಂದರ್ಭದಲ್ಲಿ ಕೆ.ಎಸ್.ಪಿ.ಸಿ.ಬಿ. ಉಪ ಪರಿಸರ ಅಧಿಕಾರಿಯಾದ ಎಚ್.ವಿ.ಪಲ್ಲವಿ ಅವರು "ಆರೋಗ್ಯವಂತ ಭಾರತ ನಿರ್ಮಾಣವಾಗಬೇಕಾದರೆ, ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು, ಆಗ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯವಾಗಲಿದೆ" ಎಂದರು.

ತುಮಕೂರು ವಿಭಾಗದ ಕಾರ್ಮಿಕ ಅಧಿಕಾರಿಯಾದ ಕೆ.ತೇಜಾವತಿ ಅವರು ಮಾತನಾಡುತ್ತಾ "ಸುಮಾರು 13ವರ್ಷಗಳ ಕಾಲ ಶಿಕ್ಷಕಿಯಾಗಿ ಕೆಲಸ ಮಾಡಿ ಬಂದಿದ್ದೇನೆ. ಒಬ್ಬ ಯಶಸ್ವಿ ಮಹಿಳೆಯ ಹಿಂದೆ ಪುರುಷರ ಸಹಕಾರ ಇರುತ್ತದೆ. ಸ್ತ್ರೀಯರನ್ನು ಎಲ್ಲಿ ಪೂಜಿಸಲ್ಪಡುತ್ತಾರೂ ಅಲ್ಲಿ ಶಾಂತಿ, ನೆಮ್ಮದಿ ಸಿಗುತ್ತದೆ. ಮಹಿಳೆಯರು ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು" ಎಂದರು.




ತುಮಕೂರು ಮಹಾನಗರ ಪಾಲಿಕೆಯ ಆಯುಕ್ತರಾದ ಬಿ.ವಿ.ಅಶ್ವಿಜ, ಉಪಪರಿಸರ ಅಧಿಕಾರಿಯಾದ ಎಚ್.ವಿ.ಪಲ್ಲವಿ, ಕಾರ್ಮಿಕ ಅಧಿಕಾರಿಯಾದ ಕೆ.ತೇಜಾವತಿ, ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್ ಮತ್ತು ನೇತ್ರ ತಜ್ಞರಾದ ಡಾ.ಲಾವಣ್ಯ ರಮಣ ಮತ್ತು ಶ್ರೀದೇವಿ ವೈದ್ಯಕೀಯ ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ.




ತುಮಕೂರು ಮಹಾನಗರ ಪಾಲಿಕೆಯ ಆಯುಕ್ತರಾದ ಬಿ.ವಿ.ಅಶ್ವಿಜ, ಉಪಪರಿಸರ ಅಧಿಕಾರಿಯಾದ ಎಚ್.ವಿ.ಪಲ್ಲವಿ, ಕಾರ್ಮಿಕ ಅಧಿಕಾರಿಯಾದ ಕೆ.ತೇಜಾವತಿ ಅವರಿಗೆ ಸನ್ಮಾನ.

ಅಂತರಾಷ್ಟ್ರೀಯ ವಿಶ್ವ ಮಹಿಳಾ ದಿನಾಚರಣೆ ಆಚರಿಸುತ್ತಿರುವ ದಿನದಂದೇ ತುಮಕೂರು ಮಹಾನಗರ ಪಾಲಿಕೆಯ ಆಯುಕ್ತರಾದ ಬಿ.ವಿ.ಅಶ್ವಿಜ ಅವರು ಹುಟ್ಟುಹಬ್ಬವಿದ್ದು, ಅದನ್ನು ಕೇಕ್ ಕತ್ತರಿಸುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಹುಲಿನಾಯ್ಕರ್ ಅವರು "ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರ ಪಾತ್ರ ಅತ್ಯಮೂಲ್ಯವಾಗಿದೆ. ಅವರು ರಾಷ್ಟ್ರ ನಿರ್ಮಾಪಕರಾಗಿದ್ದಾರೆ. ಮಹಿಳಾ ದಿನಾಚರಣೆಯ ಶುಭ ಸಂದರ್ಭದಲ್ಲಿ ತಮ್ಮ ಸಂಸ್ಥೆಯಲ್ಲಿರುವ ಎಲ್ಲಾ ಮಹಿಳಾ ನೌಕರರಿಗೆ ಶುಭ ಹಾರೈಸುತ್ತೇನೆ" ಎಂದರು.

ಈ ಸಂದರ್ಭದಲ್ಲಿ ಶ್ರೀದೇವಿ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಪ್ರವೇಶ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ರೂಪಾ ವರ್ಣೆಕರ್ ಅವರು ಮೂವತ್ತು ವರ್ಷದಿಂದ ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು. ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದ ಮುಖ್ಯಸ್ಥರು ಹಾಗೂ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಉಪ ಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಪ್ರದೀಪ್‌ಕುಮಾರ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್, ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ ಅವರುಗಳು ಭಾಗವಹಿಸಿದ್ದರು.

ವರದಿ: ಎನ್. ಆನಂದ

ಮಹಿಳಾ ಶಕ್ತಿ



# ಚುನಾವಣೆ ಹಬ್ಬವಲ್ಲ, ಜವಾಬ್ದಾರಿ ನೆನಪಿಸುವ ಗಳಿಗೆ

◀◀ ...ಮೊದಲನೇ ಪುಟದಿಂದ

2024ರ ಲೋಕಸಭಾ ಚುನಾವಣೆಯನ್ನು 1952ರ ಚುನಾವಣೆಗೆ ಹೋಲಿಸಿದರೆ ಈಗಿನ ಚುನಾವಣೆಗಳು ಹೇಗೆ ಹಣ ನುಂಗುವ ಘಟನೆಗಳಾಗಿವೆ ಎಂಬುದು ತಿಳಿಯುತ್ತದೆ. 'ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್' ಎನ್ನುವ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ 2019ರ ಲೋಕಸಭಾ ಚುನಾವಣೆಗೆ ಎಲ್ಲ ರಾಜಕೀಯ ಪಕ್ಷಗಳು ಸೇರಿದಂತೆ 60 ಸಾವಿರ ಕೋಟಿ.ರೂ.ಗಳನ್ನು ವೆಚ್ಚ ಮಾಡಿದ್ದವು. ಅದರಲ್ಲಿ ಆಳುವ ಪಕ್ಷ 27ಸಾವಿರ ಕೋಟಿ.ರೂಗಳನ್ನು ವೆಚ್ಚ ಮಾಡಿತ್ತು.

ಅದೇ ಸಂಸ್ಥೆ ಅಭಿಪ್ರಾಯಪಟ್ಟಿರುವಂತೆ 2024ರ ಚುನಾವಣೆಗೆ ಒಟ್ಟಾರೆ 1ಲಕ್ಷ ಕೋಟಿ.ರೂ.ಗಳು ವೆಚ್ಚವಾಗಬಹುದು. ಕರ್ನಾಟಕ ರಾಜ್ಯದ ಆಯವ್ಯಯದಲ್ಲಿ ಶೇಕಡ 33ರಷ್ಟು ಮೊತ್ತವನ್ನು ಈ ಸಲದ ಲೋಕಸಭಾ ಚುನಾವಣೆ ನುಂಗಿ ನೀರು ಕುಡಿಯುತ್ತದೆ. ಚುನಾವಣೆಗಾಗಿ ಇಷ್ಟು ಬೃಹತ್ ಪ್ರಮಾಣದ ವೆಚ್ಚವನ್ನು ವಿಶ್ವದ ಯಾವ ರಾಷ್ಟ್ರವು ಮಾಡುವುದಿಲ್ಲ. ಇದರ ಬಹುಮಟ್ಟಿನ ಮೊತ್ತ ಕಪ್ಪು ಹಣದ ರೂಪದಲ್ಲಿ ವೆಚ್ಚವಾಗುತ್ತದೆ. ಇಂತಹ ಬೃಹತ್ ಪ್ರಮಾಣದ  ಕಪ್ಪು ಹಣ ಚಲಾವಣೆಯಾದರೆ ದೇಶದ ಆರ್ಥಿಕ ಸ್ಥಿತಿ ಏನಾಗಬಹುದು, ಊಹಿಸಿ.

ಈ ಚುನಾವಣೆ ದೇಶದ ನಿರುದ್ಯೋಗ, ಆರೋಗ್ಯವಲಯ, ಗ್ರಾಮೀಣಾಭಿವೃದ್ಧಿ, ನೀರಾವರಿ, ಮಹಿಳೆ ಮತ್ತು ಮಕ್ಕಳ ಆರೋಗ್ಯದ ಪರಿಸ್ಥಿತಿ, ಮೂಲಭೂತ ಸೌಕರ್ಯ, ಕಾನೂನು ಸುವ್ಯವಸ್ಥೆ, ಹಿಂದುಳಿದ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ಸ್ಥಿತಿಗತಿ ಮೊದಲಾದ ವಿಚಾರಗಳನ್ನು ಚರ್ಚೆ ಮಾಡುವುದಿಲ್ಲ. ವಿಶ್ವ ಬ್ಯಾಂಕ್‌ನ ವರದಿಯಂತೆ 2019ರಲ್ಲಿ ದೇಶದಲ್ಲಿ ಶೇಕಡ 8.30ರಷ್ಟಿದ್ದ ನಿರುದ್ಯೋಗದ ಪ್ರಮಾಣ ಇಂದು ಶೇಕಡ 22ಕ್ಕೆ ಜಿಗಿದಿದೆ.

2022ರ ಜನವರಿ ಹೊತ್ತಿಗೆ ದೇಶದಲ್ಲಿ 5.30 ಕೋಟಿ ಜನರು ನಿರುದ್ಯೋಗಿಗಳಾಗಿದ್ದಾರೆ. ಅದರಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು. ಕರೋನಾ ಅಪ್ಪಳಿಸಿದ ಸಂದರ್ಭದಲ್ಲಿ ಅನೇಕ ಕಾರ್ಖಾನೆಗಳು ಬಾಗಿಲು ಹಾಕಿದವು. ಅದರಿಂದ ನಿರುದ್ಯೋಗ ಪ್ರಮಾಣ ಹೆಚ್ಚಿದೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಇದು ಚರ್ಚೆಯ ವಿಷಯವಾಗ ಬೇಕಾಗಿತ್ತು.

ದೇಶದಲ್ಲಿ  ಆರ್ಥಿಕವಾಗಿ ದುರ್ಬಲವಾಗಿರುವ 81.35 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತಾ ಕಾಯ್ದೆ ಅನ್ವಯ ಉಚಿತ ಆಹಾರವನ್ನು ಸರ್ಕಾರ ಒದಗಿಸುತ್ತಿದೆ. ಅಂದರೆ ಭಾರತದ ವಿಶ್ವದ ಅತಿ ಹೆಚ್ಚು ಬಡವರನ್ನು ಹೊಂದಿರುವ ರಾಷ್ಟ್ರವೆನ್ನುವುದು ಸಾಬೀತು ಆಗಿದೆ ಅಲ್ಲವೇ?


ಇವು ರಾಷ್ಟ್ರದ ಜನತೆಯ ಚಿಂತನೆಯ ವಿಷಯವಾಗಬೇಕಲ್ಲವೇ? ಚುನಾವಣೆ ಪ್ರಜಾಪ್ರಭುತ್ವದ ಹಬ್ಬ ಎಂದು ಕುಣಿದಾಡುವ ಗಳಿಗೆಯಲ್ಲ. ಅದರ ಬದಲು ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಅವಲೋಕಿಸಿ ಅದಕ್ಕೆ ಪರಿಹಾರಗಳೇನು ಎಂದು ಚಿಂತಿಸಿ ಅದಕ್ಕನುಗುಣವಾಗಿ ಮತದಾರರು ತೀರ್ಮಾನ ಕೈಗೊಳ್ಳುವ ಸನ್ನಿವೇಶ ಈ ಲೋಕಸಭಾ ಚುನಾವಣೆ ಎಂದರೆ ತಪ್ಪಿಲ್ಲ.

ಸಾಮಾನ್ಯ ಮತದಾರರು ಎಂದೂ ದೇಶದ ಜ್ವಲಂತ ಸಮಸ್ಯೆಗಳನ್ನು ಕುರಿತು ಆಲೋಚಿಸಿ ತೀರ್ಮಾನ ಕೈಗೊಳ್ಳುವಷ್ಟು ಬುದ್ಧಿವಂತರಾಗಿರುವುದಿಲ್ಲ. ಅವರಿಗೆ ತಜ್ಞರ ಮಾರ್ಗದರ್ಶನ ಅಗತ್ಯವಿರುತ್ತದೆ. ಅದರಲ್ಲೂ ವಿಶ್ವವಿದ್ಯಾನಿಲಯಗಳಲ್ಲಿರುವ ಪ್ರಾಧ್ಯಾಪಕರು ಮತ್ತು ತಜ್ಞರು ಜನರಿಗೆ ಈ ವಿಚಾರದಲ್ಲಿ ಮಾರ್ಗದರ್ಶನ ನೀಡುವ ಅಗತ್ಯವಿದೆ. ಚೀಣಾ ದೇಶದಲ್ಲಿ ನಡೆದ ಅನೇಕ ಕ್ರಾಂತಿಕಾರಕ ಘಟನೆಗಳ ಸಂದರ್ಭದಲ್ಲಿ ಆ ದೇಶದಲ್ಲಿರುವ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಜನರಿಗೆ ಮಾರ್ಗದರ್ಶನ ನೀಡಿರುವ ಸನ್ನಿವೇಶಗಳಿವೆ.

ಭಾರತದಲ್ಲಿ ಪ್ರಸ್ತುತ 1114 ವಿಶ್ವವಿದ್ಯಾನಿಲಯಗಳಿವೆ. ಅಲ್ಲಿರುವ ವಿದ್ವಾಂಸರು ತಮಗೆ ದೇಶದ ಜನಸಾಮಾನ್ಯರ ಹಿತಾಸಕ್ತಿ ಮುಖ್ಯವೆಂದು ಭಾವಿಸಬೇಕು. ರಾಷ್ಟ್ರದ ಜನಸಾಮಾನ್ಯರಿಗೆ ಅಗತ್ಯ ಮತ್ತು ಸತ್ಯಕ್ಕೆ ಸಮೀಪವೆನಿಸುವ ಮಾಹಿತಿಯನ್ನು ಕೊಡುವುದು ತಮ್ಮ ಕರ್ತವ್ಯವೆಂದು ಅವರು ಭಾವಿಸಬೇಕು. ದುರಾದೃಷ್ಟವಶಾತ್ ಎಂದೂ ನಮ್ಮ  ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ದೇಶದ ಶ್ರೀಸಾಮಾನ್ಯರನ್ನು ಕುರಿತು ಯೋಚಿಸಿದ ಸನ್ನಿವೇಶವಿಲ್ಲ.

ಮತ್ತೊಂದು ವಲಯ ಮಾಧ್ಯಮ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳಿಗೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಮಾಧ್ಯಮಗಳು ಪ್ರಜಾಪ್ರಭುತ್ವದ ಕಾವಲು ನಾಯಿ ಎನ್ನುವ ಪ್ರಶಂಸೆಗೆ  ಪಾತ್ರವಾಗಿವೆ. ಅವುಗಳ ನಿಷ್ಪಕ್ಷತವಾಗಿ  ಕೆಲಸ ಮಾಡುವ ವಿಚಾರದಲ್ಲಿ ದೇಶದ ಶ್ರೀಸಾಮಾನ್ಯನಿಗೆ ನಂಬಿಕೆ ಮೂಡುತ್ತಿಲ್ಲ. ರಾಷ್ಟ್ರದಲ್ಲಿ ಆರ್.ಎನ್.ಐನಲ್ಲಿ 82,222 ಪತ್ರಿಕೆಗಳು ನೊಂದಾಯಿತವಾಗಿದೆ. ಅದರಲ್ಲಿ 10 ಪತ್ರಿಕೆಗಳು ಮಾತ್ರ ರಾಷ್ಟ್ರ ಮಟ್ಟದ ಪತ್ರಿಕೆಗಳು ಎನ್ನುವ ಮಹತ್ವ ಪಡೆದಿದೆ. ಅದು ಓದುಗರ ಸಂಖ್ಯೆಯಿಂದ ಇಂತಹ ಮಾನ್ಯತೆ ಪಡೆದಿವೆ. ಸ್ಥಳೀಯ ಪತ್ರಿಕೆಗಳು ಸಹ ತಮ್ಮ ಪ್ರಭಾವವನ್ನು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಬೆಳಸಿಕೊಂಡಿವೆ. ಪತ್ರಿಕೆಗಳು ಉದ್ಯಮವಾದ ಕಾರಣ ಹಿತಾಸಕ್ತಿಗಳು ಇಲ್ಲಿ ಕೆಲಸ ಮಾಡುತ್ತವೆ.

ಅದೇ ಮಾನ್ಯತೆ ಪಡೆದ 1148ನ ಖಾಸಗಿ ಉಪಗ್ರಹ ಚಾನಲ್‌ಗಳಿವೆ. ಹಿಂದಿ ಭಾಷೆಯಲ್ಲಿ 21 ಚಾನಲ್‌ಗಳಿವೆ. ಸರ್ಕಾರದ ಒಡೆತನಕ್ಕೆ ಸಂಬಂಧಪಟ್ಟ ನೂರು ವಾಹಿನಿಗಳಿವೆ. ಇವುಗಳು ಚುನಾವಣೆಯನ್ನು ರಂಜನೀಯವಾಗಿ ಮಾಡಲು ನಿರಂತರ ಪ್ರಯತ್ನ ನಡೆಸುತ್ತವೆ. ಟಿ.ಆರ್.ಪಿ. (ಟೆಲಿವಿಷನ್ ರೇಟಿಂಗ್ ಪಾಯಿಂಟ್) ಎಷ್ಟು ಹೆಚ್ಚಾಗುತ್ತದೆ ಎನ್ನುವುದ ಅವರ ಧೋರಣೆಯಾಗಿರುತ್ತದೆ.



1952ರ ಲೋಕಸಭಾ ಮೊದಲ ಚುನಾವಣೆಯ ಮತದಾನ

ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶದ ಜನರ ಜೀವನ ಮಟ್ಟದಲ್ಲಿ ಆಗಾಧವಾದ ವ್ಯತ್ಯಾಸವಿದೆ. ಅವರ ಆದಾಯದಲ್ಲಿ ಸಾಕಷ್ಟು ಅಂತರವಿದೆ. ಅದರಲ್ಲೂ ಯುವಜನರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಎಷ್ಟೋ ಯುವಕರಿಗೆ ಬಾಳಸಂಗಾತಿ ಸಿಗುತ್ತಿಲ್ಲ. ಅದಕ್ಕೆ ಕಾರಣ ಅವರು ಗ್ರಾಮೀಣ ಪ್ರದೇಶದಲ್ಲಿದ್ದಾರೆ ಎನ್ನುವುದು.



ಕಳೆದ 77 ವರ್ಷಗಳಲ್ಲಿ ರಾಷ್ಟ್ರದಲ್ಲಿ ಯಾವುದೇ ಪ್ರಗತಿಯಾಗಿಲ್ಲ ಎನ್ನುವುದು ನನ್ನ ಭಾವನೆಯಲ್ಲ. ಅನೇಕ ಕ್ಷೇತ್ರದಲ್ಲಿ ರಾಷ್ಟ್ರದ ಬೆಳವಣಿಗೆ ವಿಶ್ವದ ಗಮನ ಸೆಳೆದಿದೆ. ಬಾಹ್ಯಾಕಾಶದಲ್ಲಿ ಆಗಿರುವ ಪ್ರಗತಿ ಎಲ್ಲರಿಗೂ ತಿಳಿದಿದೆ. ನಾನು ಆರೋಗ್ಯವಲಯದಲ್ಲಿ ಕೆಲಸ ಮಾಡುತ್ತಿರುವ ಕಾರಣ ಈ ಕ್ಷೇತ್ರದಲ್ಲಾದ ಪ್ರಗತಿಯನ್ನು ಜ್ಞಾಪಿಸಿಕೊಳ್ಳುತ್ತೇನೆ.

1950 ರಿಂದ 60ರವರೆಗೆ ಸಾವಿರ ಜನಸಂಖ್ಯೆಗೆ ಒಂದು ಹಾಸುಗೆಯೂ ಇಲ್ಲದ ಪರಿಸ್ಥಿತಿ ಭಾರತದಲ್ಲಿತ್ತು. ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿರಲಿಲ್ಲ. ಇನ್ನು ಉಪ ಆರೋಗ್ಯ ಕೇಂದ್ರಗಳು ಹೋಬಳಿ ಮಟ್ಟದಲ್ಲಿ ಎಲ್ಲಿ ಕಾಣಲು ಸಾಧ್ಯ. ಈಗ ಸಾವಿರ ಜನಸಂಖ್ಯೆಗೆ 200 ಹಾಸುಗೆಗಳಿವೆ. 954 ಜನರಿಗೆ ಒಬ್ಬ ವೈದ್ಯರು ದೊರೆಯುತ್ತಾರೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಪ್ರತಿ ಜಿಲ್ಲಾಕೇಂದ್ರಗಳಲ್ಲೂ ಜಿಲ್ಲಾಸ್ಪತ್ರೆಗಳಿವೆ. ಅದರ ಜೊತೆ 206 ಸಮುದಾಯ ಆರೋಗ್ಯ ಕೇಂದ್ರಗಳಿವೆ. 2359 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. 8871 ಉಪ ಆರೋಗ್ಯ ಘಟಕಗಳಿವೆ. ಜೊತೆಗೆ ನಾವು ಮಲೇರಿಯಾ, ಕಾಲರಾ, ಸಿಡುಬು. ಪೋಲಿಯೋ, ಟೈಫಾಯ್ಡ್ ಮೊದಲಾದ ಕಾಯಿಲೆಗಳನ್ನು ನಿರ್ಮೂಲನಾ ಮಾಡಲಾಗಿದೆ

ಮರಣ ಪ್ರಮಾಣ ಇಳಿಕೆಯಾಗಿ ವ್ಯಕ್ತಿಯ ಆಯಸ್ಸಿನ ಪ್ರಮಾಣ ಹೆಚ್ಚಾಗಿದೆ. 2000 ಇಸವಿಯಲ್ಲಿ ವ್ಯಕ್ತಿಯ ಆಯಸ್ಸಿನ ಪ್ರಮಾಣ 62 ವರ್ಷವಿತ್ತು. 2022ಕ್ಕೆ ಅದು 70ವರ್ಷಕ್ಕೆ ಏರಿದೆ. 1900ರಲ್ಲಿ ವ್ಯಕ್ತಿಯ ಆಯಸ್ಸಿನ ಸರಾಸರಿ 47ವರ್ಷವಾಗಿತ್ತು. ವ್ಯಕ್ತಿಯ ಆಯಸ್ಸಿನ ಏರಿಕೆಯಲ್ಲಿ ವೈದ್ಯಕೀಯ ಲೋಕದ ಕೊಡುಗೆಯಿದೆ.

1960ರಲ್ಲಿ ಆರೋಗ್ಯ ವಲಯಕ್ಕೆ ಸರ್ಕಾರ ಸಣ್ಣ ಪ್ರಮಾಣದ ಮೊತ್ತವನ್ನು ತನ್ನ ಆಯವ್ಯಯದಲ್ಲಿ ನೀಡುತ್ತಿತ್ತು. ಈಗ ಆಯವ್ಯಯದಲ್ಲಿ ಶೇಕಡ 4ರಷ್ಟು ದೊಡ್ಡ ಮೊತ್ತ ಆರೋಗ್ಯ ವಲಯಕ್ಕೆ ದೊರೆಯುತ್ತಿದೆ. ಅದರಲ್ಲೂ ಖಾಸಗಿಯವರ ಪ್ರವೇಶದಿಂದಾಗಿ ಭಾರತದ ಆರೋಗ್ಯವಲಯದ ಚಿತ್ರಣ ಸಂಪೂರ್ಣವಾಗಿ ಬದಲಾಗಿದೆ. ಅದು ಉದ್ಯೋಗ ಸೃಷ್ಟಿಯ ವಲಯವೂ ಆಗಿದೆ.

ಭಾರತದ ಆರೋಗ್ಯವಲಯ ಇಂದು ವಿಶ್ವದದಲ್ಲಿ ಅತ್ಯಂತ ಅಭಿವೃದ್ಧಿ ಕಾಣುತ್ತಿರುವ ಕ್ಷೇತ್ರವಾಗಿದೆ. ದೇಶದಲ್ಲಿ 2024ರ ಪ್ರಕಾರ 706 ವೈದ್ಯಕೀಯ ಕಾಲೇಜುಗಳಿವೆ. ಅದರಲ್ಲಿ ಕರ್ನಾಟಕ ರಾಜ್ಯವೊಂದರಲ್ಲೇ 60 ವೈದ್ಯಕೀಯ ಕಾಲೇಜುಗಳಿವೆ.ಅದರಲ್ಲಿ 1,0,9145 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಜಿಲ್ಲಾ ಕೇಂದ್ರಗಳಲ್ಲಿ ವೈದ್ಯಕೀಯ ಕಾಲೇಜುಗಳಿದ್ದರೆ ಇಡೀ ಜಿಲ್ಲೆಯ ಜನರ ಆರೋಗ್ಯದ ರಕ್ಷಣೆ ಸುಸೂತ್ರವಾಗಿ ನಡೆಯುತ್ತಿದೆ ಎನ್ನಲು ಯಾವುದೇ ಅಡ್ಡಿಯಿಲ್ಲ.

ಹಿಂದೆ ವೈದ್ಯಕೀಯ ಕ್ಷೇತ್ರದಲ್ಲಿ ಎಕ್ಸ್ ರೇ ಮಾತ್ರ ಕಾಣುವ ವೈದ್ಯಕೀಯ ಉಪಕರಣವಾಗಿತ್ತು. 'ಲ್ಯಾಬ್'ನ ಪರಿಕಲ್ಪನೆ ಅಷ್ಟಾಗಿ ಕಾಣಬರುತ್ತಿರಲಿಲ್ಲ. ಔಷಧ ಉತ್ಪಾದನೆ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ವೈದ್ಯರು ತಮ್ಮ ಕ್ಲಿನಿಕಲ್ ಅನುಭವದಿಂದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಶಸ್ತ್ರಚಿಕಿತ್ಸೆ ಕೂಡ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿತ್ತು.

ವೈದ್ಯಕೀಯ ಕ್ಷೇತ್ರದಲ್ಲಾದ ಬೆಳವಣಿಗೆ ಅಧ್ಯಯನಕ್ಕೆ ಯೋಗ್ಯವಾದ ವಿಚಾರ. ಇಂದು ಲೇಸರ್ ಮತ್ತು ರೊಬೊಟಿಕ್ ಶಸ್ತ್ರಚಿಕಿತ್ಸೆಗಳನ್ನು ಅತ್ಯಂತ ಸರಳ ಮತ್ತು ವಿಶ್ವಾಸಾರ್ಹವಾಗಿವೆ. ಇದರ ಪ್ರಯೋಜನ ಶ್ರೀಸಾಮಾನ್ಯರಿಗೆ ದೊರಕಿ ಅವರಲ್ಲಿ ಸಂತೃಪ್ತಿ ಕಾಣಬಹುದಾಗಿದೆ.

ಅತ್ಯುತ್ತಮ ಆರೋಗ್ಯ ಸೌಲಭ್ಯ ದೇಶದ ಗ್ರಾಮೀಣ ಪ್ರದೇಶಗಳಿಗೆ ಇನ್ನು ತಲುಪಿಲ್ಲ ಎನ್ನುವುದು ವಾಸ್ತವದ ವಿಚಾರ. ಕ್ಯಾನ್ಸರ್, ಮೂತ್ರಪಿಂಡದ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆ ಹಾಗೂ ನ್ಯೂರೋ ಕಾಯಿಲೆಗಳಿಗೆ ಕೊಡುವ ಚಿಕಿತ್ಸೆ ಅತ್ಯಂತ ದುಬಾರಿಯಾಗಿರುತ್ತದೆ. ಮಧ್ಯಮ ವರ್ಗ ಮತ್ತು ಬಡವರು ಈ ವೆಚ್ಚವನ್ನು ಭರಿಸಲು ಸಾಧ್ಯವಾಗುವುದಿಲ್ಲ. ಇನ್ನು ಗ್ರಾಮೀಣ ಪ್ರದೇಶದ ಜನರಿಗೆ ಇಂತಹ ಕಾಯಿಲೆಗಳು ಬಂದರೆ ಅವರು ಅಸಹಾಯಕರಾಗುತ್ತಾರೆ.

ಐದು ವರ್ಷಕ್ಕೊಮ್ಮೆ ನಡೆಯುವ ಲೋಕಸಭಾ ಚುನಾವಣೆಗಳು ಇಂತಹ ಜ್ವಲಂತ ಸಮಸ್ಯೆಗಳನ್ನು ಕುರಿತು ಚರ್ಚಿಸುವಂತಾಗಬೇಕು. ವಿವಿಧ ಕ್ಷೇತ್ರಗಳಲ್ಲಿರುವ ಸಮಸ್ಯೆಗಳನ್ನು ಮತದಾರರು ತಮ್ಮ ರಾಜಕೀಯ ಮುಖಂಡರಿಗೆ ಗಟ್ಟಿಯಾದ ಧ್ವನಿಯಲ್ಲಿ ಹೇಳುವಂತಾಗಬೇಕು. ಅವರು ಮತದಾರರಿಗೆ ರಾಜಕೀಯ ವ್ಯಕ್ತಿಗಳು ಈ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿ ತಾವು ಗೆದ್ದ ಮೇಲೆ ಅವುಗಳನ್ನು ಅನುಷ್ಠಾನ ಮಾಡುವುದಾಗಿ ಅಶ್ವಾಸನೆ ಕೊಡಬೇಕು. ಗೆದ್ದ ಮೇಲೆ ಜನಪ್ರತಿನಿಧಿಗಳಿಗೆ ತಾವು ಕೊಟ್ಟ ಅಶ್ವಾಸನೆಯ ಮೇಲೆ ಬದ್ಧತೆಯಿರಬೇಕು. ಮತದಾರರು ಸದಾ ಜಾಗೃತವಾಗಿದ್ದರೆ ಜನಪ್ರತಿನಿಧಿ ತನ್ನ ಅಶ್ವಾಸನೆಗಳನ್ನು ಮರೆಯುವುದಿಲ್ಲ.

ಮತದಾರರು ಚುನಾವಣೆಯಲ್ಲಿ ಗೆದ್ದ ತಮ್ಮ ಪ್ರತಿನಿಧಿಗಳನ್ನು ದೇವರು ಮಾಡಬಾರದು. ಅವರು ಜನತೆಯ ಸೇವಕರು ಎನ್ನುವ ವಿಚಾರವನ್ನು ಪ್ರಜ್ಞಾವಂತ ಮತದಾರರು ಮರೆಯಬಾರದು. ಭಾರತದ ಪ್ರಜಾಪ್ರಭುತ್ವದ ಅತಿ ದೊಡ್ಡ ಅಪಾಯ ವ್ಯಕ್ತಿಪೂಜೆ. ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರು ಅವರ ಕಾಲದಿಂದಲೇ ಇದು ಪ್ರಾರಂಭವಾಗಿದೆ.

ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಜಾಗೃತ ಮತದಾರರ ಮಾತ್ರ ಹೆಚ್ಚಿರುತ್ತದೆ. ಭಾವಾವೇಶಕ್ಕೊಳಗಾಗದ ಮತದಾರರು ಮಾತ್ರ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಕಾಪಾಡಬಲ್ಲರು. ಜನರನ್ನು ಭಾವೋದ್ರೇಕಕ್ಕೆ ಒಳಪಡಿಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ಜನ ಎಲ್ಲಾ ಕಾಲದಲ್ಲೂ ಇರುತ್ತಾರೆ. ಅಂತಹವರ ಕುತಂತ್ರಕ್ಕೆ ಬಲಿಯಾದರೆ ದೇಶದಲ್ಲಿ ನಿಜವಾದ ಪ್ರಜಾಪ್ರಭುತ್ವವಿರುವುದಿಲ್ಲ. ಮತದಾರರು ಎಚ್ಚರವಾಗಿದ್ದಾಗ ಮಾತ್ರ ಪ್ರಜಾಪ್ರಭುತ್ವದ ಮೌಲ್ಯಗಳು ಅನುಷ್ಠಾನವಾಗುತ್ತದೆ. ಹೀಗಾಗಿ ಚುನಾವಣೆ ಹಬ್ಬವಲ್ಲ, ಅದರ ಬದಲು ಚಿಂತನೆಯ ಕ್ಷಣವಾಗಿದೆ.

■ ನಿರೂಪಣೆ: ಶ್ರೀವತ್ಸ

# ಆವಿಷ್ಕಾರಗೊಂಡ ವೈದ್ಯಕೀಯ ಉಪಕರಣದಿಂದ ಶಸ್ತ್ರಚಿಕಿತ್ಸೆಗೆ ಸಹಾಯ

▪ ಡಾ. ಎಂ.ಆರ್. ಹುಲಿನಾಯ್ಕರ್




ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಬೆಂಗಳೂರಿನ ಕರ್ನಾಟಕ ನೇತ್ರ ಸಂಸ್ಥೆಯ ಅಧ್ಯಕ್ಷರಾದ ಡಾ.ಕೃಷ್ಣ ಪ್ರಸಾದ್ ಕೂಡ್ಲು, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್, ಡಾ.ಲಾವಣ್ಯ, ಡಾ.ಡಿ.ರವಿಪ್ರಕಾಶ್, ಡಾ.ಜಿ.ನಾಗರಾಜು, ಡಾ.ಎಂ.ಸಂಜಯ್, ಡಾ.ರವೀಂದ್ರ, ಡಾ.ಮಹಾದೇವಪ್ಪ, ಡಾ.ಕೆ.ಪಿ.ಕಲ್ಲೇಶ್ವರ್, ಡಾ.ಜಿ.ಎಸ್.ಪ್ರವೀಣ್ ಕುಮಾರ್, ಡಾ.ಸಂದೀಪ್ ಶೆಣೈ ಹಾಗೂ ತುಮಕೂರಿನ ನೇತ್ರ ವಿಜ್ಞಾನ ಸಂಘದ ಸದಸ್ಯರುಗಳು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ನೇತ್ರ ತಜ್ಞ ವಿಭಾಗ ಮತ್ತು ತುಮಕೂರು ನೇತ್ರವಿಜ್ಞಾನ ಸೊಸೈಟಿಯ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ನೇತ್ರ ತಜ್ಞರ ಸಂಘದ ವತಿಯಿಂದ "ನೇತ್ರ ಕಲ್ಪ–2024 ಕತ್ತಲಿನಿಂದ ಬೆಳಕಿನೆಡೆಗೆ" ಸಿ.ಎಂ.ಇ. ರಾಜ್ಯಮಟ್ಟದ ಕಾರ್ಯಾಗಾರವನ್ನು ಫೆಬ್ರವರಿ 25ರಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದಲ್ಲಿ ನೇತ್ರಶಸ್ತ್ರಚಿಕಿತ್ಸಾ ತಜ್ಞರ ಅಸೋಷಿಯೇಷನ್ ಅಧ್ಯಕ್ಷರಾದ ಡಾ. ಕೃಷ್ಣ ಪ್ರಸಾದ್ ಕೂಡ್ಲ, ಬೆಂಗಳೂರಿನ ಮಿಂಟೋ ಆಸ್ಪತ್ರೆಯ ನಿರ್ದೇಶಕರಾದ ಡಾ.ನಾಗರಾಜ್, ಕಾರ್ತಿಕ್ ನೇತ್ರಾಲಯದ ನಿರ್ದೇಶಕರಾದ ಡಾ.ಎಂ.ಎನ್. ರವೀಂದ್ರ, ಲಯನ್ಸ್ ಆಸ್ಪತ್ರೆಯ ಡಾ.ರೇಖಾ ಜ್ಞಾನಚಂದ್, ಶ್ರೀದೇವಿ ಆಸ್ಪತ್ರೆಯ ನೇತ್ರಜ್ಞ ವಿಭಾಗದ ಮುಖ್ಯಸ್ಥರಾದ ಡಾ.ಡಿ.ರವಿಪ್ರಕಾಶ್, ತುಮಕೂರುಜಿಲ್ಲಾ ನೇತ್ರ ಶಸ್ತ್ರಚಿಕಿತ್ಸಾತಜ್ಞರ ಸಂಘದ ಅಧ್ಯಕ್ಷರಾದ ಡಾ. ಸಂಜಯ್ ಎಂ, ತುಮಕೂರು ನೇತ್ರ ಶಸ್ತ್ರಚಿಕಿತ್ಸಾತಜ್ಞರ ಸಂಘದ ಸಂಘಟನಾ ಕಾರ್ಯದರ್ಶಿಯಾಗಿರುವ ಡಾ.ದಿನೇಶ್ ಕುಮಾರ್, ಖಜಾಂಚಿಯಾಗಿ ಡಾ.ಎಂ.ಜಿ.ಗಂಗಾಧರ್, ವೈಜ್ಞಾನಿಕ ಸಮಿತಿಯಲ್ಲಿ ಡಾ.ಎಸ್.ಮಂಜುನಾಥ್, ಡಾ.ಜಿ.ಭಾನುಶ್ರೀ, ಡಾ.ಕೆ. ಆರ್.ಮಂಜುನಾಥ್, ಸಂಘಟನಾ ಸಮಿತಿಯಲ್ಲಿ ಡಾ.ಲಾವಣ್ಯ ರಮಣ್ ಹುಲಿನಾಯ್ಕರ್, ಡಾ.ರವೀಂದ್ರ, ಡಾ.ಮಹಾದೇವಪ್ಪ, ಡಾ.ಕೆ.ಪಿ.ಕಲ್ಲೇಶ್ವರ್, ಡಾ.ಜಿ.ಎಸ್.ಪ್ರವೀಣ್ ಕುಮಾರ್ ಮತ್ತು ಡಾ.ಸಂದೀಪ್ ಶೆಣೈ ಅವರುಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸ್ಥಾಪಕ ಅಧ್ಯಕ್ಷರೂ ಮತ್ತು ಖ್ಯಾತ ಸರ್ಜನ್ ಆಗಿರುವ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಮಾತನಾಡುತ್ತಾ "ಇಂದು ರಾಜ್ಯದ ನೇತ್ರ ಶಸ್ತಚಿಕಿತ್ಸಾ ತಜ್ಞರು ಇಲ್ಲಿ ಸಮಾವೇಶಗೊಂಡಿರುವುದು ಸಂತೋಷದ ವಿಚಾರ. ತಾವುಗಳು ಕಣ್ಣಿನರೆಪ್ಪೆಯಿಂದ ಹಿಡಿದು ರೆಟೀನಾವರೆಗೆ ಪರ್ಯಾಲೋಚನೆ ಮಾಡುತ್ತಿರುವುದು ಸಮಂಜಸವಾಗಿದೆ. ಕಣ್ಣಿನರೆಪ್ಪೆ, ಕಾರ್ನಿಯಾ ಮತ್ತು ಗ್ಲೋಕೋಮಾ (Glaucoma) ವಿಚಾರವಾಗಿ ತಾವು ಚರ್ಚೆ ಮಾಡುತ್ತಿರುವುದು, ತಜ್ಞರು ತಮ್ಮ ಜ್ಞಾನ ಮತ್ತು ಅನುಭವವನ್ನು ರೆಸಿಡೆಂಟ್ ಸರ್ಜನ್ಸ್, ಜೂನಿಯರ್ ಸರ್ಜನ್ಸ್ ಮತ್ತು ಪ್ರಾಕ್ಟೀಸ್ ಮಾಡುತ್ತಿರುವ ಸರ್ಜನ್‌ಗಳಿಗೆ ಹಂಚುತ್ತಿರುವುದು ಅತ್ಯುತ್ತಮವಾದ ಕ್ರಿಯೆಯಾಗಿದೆ. ಶಸ್ತ್ರಚಿಕಿತ್ಸೆ ಕೇವಲ ಪಠ್ಯಜ್ಞಾನದಿಂದ ಬರುವುದಿಲ್ಲ. ಪಠ್ಯಜ್ಞಾನ ಆತ್ಮವಿಶ್ವಾಸ ತಂದುಕೊಡುವುದಿಲ್ಲ. ಶಸ್ತ್ರಚಿಕಿತ್ಸೆಯಲ್ಲಿ ಹೊಸ ಪ್ರಯೋಗಕ್ಕೆ ಸಹಾಯ ಪ್ರೇರಣೆ ನೀಡುವುದಿಲ್ಲ. ಇಂದು ನೀವು ಯುವ ಸರ್ಜನ್‌ಗಳಿಗೆ ಪ್ರಾಯೋಗಿಕವಾಗಿ ಬೋಧನೆ ಮಾಡುತ್ತಿರುವುದು ಸುತ್ಯಾರ್ಹವಾದ ಕೆಲಸವಾಗಿದೆ. ಅದಕ್ಕೆ ನೇತ್ರ ಶಸ್ತ್ರಚಿಕಿತ್ಸಾತಜ್ಞರ ಸಂಘಟನೆಯನ್ನು ಅಭಿನಂದಿಸುತ್ತೇನೆ. ಇವುಗಳ ಜೊತೆಗೆ ಸಂಶೋಧನಾ ಮನೋಭಾವವನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ನಿಮ್ಮ ಕ್ಷೇತ್ರದಲ್ಲಿ ಹೊಸದನ್ನು ಅವಿಷ್ಕಾರ ಮಾಡಲು ಸಂಶೋಧನಾ ಮನೋಭಾವ ಅಗತ್ಯವಾಗಿದೆ.

ಇಂದು ಆಪರೇಷನ್ ಕ್ಷೇತ್ರ ಅತ್ಯುತ್ತಮ ರೀತಿಯಲ್ಲಿ ಸುಧಾರಣೆಯಾಗಿದೆ. 3D Imprint ಮತ್ತು ಕೃತಕ ಬುದ್ಧಿಮತ್ತೇ ಸಹಾಯದಿಂದ ಅಂಧರು ಹೊಸ ಲೋಕವನ್ನೇ ಕಾಣುತ್ತಿದ್ದಾರೆ. ಹಿಂದೆ ಬ್ರೈಲ್ ಲಿಪಿಯಿಂದ ಜ್ಞಾನ ಪಡೆಯುತ್ತಿದ್ದರು. ಈಗ ಹೊಸ ಆವಿಷ್ಕಾರದಿಂದ ಅಂಧರಿಗೆ ಕಂಪ್ಯೂಟರ್ ಇಮೇಜ್ ದೊರಕಿ ಅವರು ಸುಲಭವಾಗಿ ಸಂವಹನ ಕ್ರಿಯೆ ನಡೆಸಲು ಸಹಾಯವಾಗಿದೆ. ಇದೊಂದು ಕ್ರಾಂತಿಕಾರಕ ಬೆಳವಣಿಗೆಯಾಗಿದೆ.

ಹಿಂದೆ ಕ್ಯಾಟ್‌ರ್ಯಾಕ್ಟ್ ಆಪರೇಷನ್‌ಗೆ ಶ್ರೀಮಂತರು ವಿದೇಶಕ್ಕೆ ಹೋಗುತ್ತಿದ್ದರು. ಲೇಸರ್ ತಂತ್ರಜ್ಞಾನ ಈ ಆಪರೇಷನ್‌ನ್ನು ಅತ್ಯಂತ ಸುಲಭವಾಗಿಸಿದೆ ಮತ್ತು ವಿಶ್ವಾಸಾರ್ಹವಾಗಿಸಿದೆ.

ಗ್ರಾಮೀಣ ಪ್ರದೇಶದಲ್ಲಿ ಅಂಧತ್ವ ನಿವಾರಣೆಗೆ 'ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ'ವನ್ನು ಸರ್ಕಾರ ಅನುಷ್ಠಾನ ಮಾಡುತ್ತಿದೆ. ಡಾ.ಕೃಷ್ಣ ಪ್ರಸಾದ್ ಕೂಡ್ಲ ಅವರು ಅವರು ಗುಜರಾತಿನ ಅಂದಿನ ಮುಖ್ಯಮಂತ್ರಿ ಶ್ರೀನರೇಂದ್ರ ಮೋದಿ ಅವರ ವಿಧಾನಸಭಾ ಕ್ಷೇತ್ರದಲ್ಲಿ ವ್ಯಾಪಕವಾದ ಆಪರೇಷನ್ ಕಾರ್ಯಕ್ರಮ ಹಮ್ಮಿಕೊಂಡು ಅನೇಕರಿಗೆ ದೃಷ್ಟಿದಾನ ಮಾಡಿರುವ ವಿಚಾರ ತಿಳಿದು ಸಂತೋಷವಾಗಿದೆ. ಅದಕ್ಕಾಗಿ ಅವರನ್ನು ಮತ್ತೊಮ್ಮೆ ಅಭಿನಂದಿಸುತ್ತೇನೆ.

Phacoemulsification cataract surgery ಬಗ್ಗೆ ಅರ್ಥಪೂರ್ಣ ಚರ್ಚೆ ನಡೆದಿರುವುದು ನನಗೆ ಸಂತೋಷ ತಂದಿದೆ.

ವೈದ್ಯಕೀಯ ಲೋಕದಲ್ಲಿ ನೇತ್ರ ಶಸ್ತ್ರಚಿಕಿತ್ಸಕರು ಅದೃಷ್ಟವಂತರು. ಅವರಿಗೆ ಕೌಟಂಬಿಕ ಮತ್ತು ಸಾಮಾಜಿಕ ಜೀವನವಿರುತ್ತದೆ. ಅವರು ಒತ್ತಡದಲ್ಲಿ ಕೆಲಸ ಮಾಡಬೇಕಾಗಿಲ್ಲ. ಜನರಲ್ ಸರ್ಜನ್‌ಗಳಾದ ನಾವು ನಿರಂತರವಾಗಿ ಒತ್ತಡದಲ್ಲಿ ಕೆಲಸ ಮಾಡಿದ್ದೇವೆ.

ನೇತ್ರತಜ್ಞರು ಸಾರ್ವಜನಿಕರಲ್ಲಿ ನೇತ್ರದಾನದ ಬಗ್ಗೆ ಅರಿವು ಮೂಡಿಸಬೇಕು. ದೇಶದಲ್ಲಿ ಶೇಕಡ 90ರಷ್ಟು ಜನ ಸಾವಿನ ನಂತರ ನಮ್ಮ ಕಣ್ಣುಗಳನ್ನು ದಾನದ ಮಾಡದ ಕಾರಣ ಅಂಧತ್ವದ ಸಮಸ್ಯೆ ಇನ್ನು ಬಗೆಹರಿದಿಲ್ಲ. ಅದನ್ನು ಸಹ ಈ ಸಂಘಟನೆ ಗಂಭೀರವಾಗಿ ಪರಿಗಣಿಸಬೇಕು" ಎಂದರು.

ಕರ್ನಾಟಕ ರಾಜ್ಯ ನೇತ್ರ ಶಸ್ತ್ರಚಿಕಿತ್ಸೆಯ ತಜ್ಞರ ಅಧ್ಯಕ್ಷರಾದ ಡಾ.ಕೃಷ್ಣ ಪ್ರಸಾದ್ ಕೂಡ್ಲ ಅವರು ಅವರು "ಶ್ರೀದೇವಿ ವೈದ್ಯಕೀಯ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಹಾಯದಿಂದ ಈ ಸಮಾವೇಶ ಯಶಸ್ವಿಯಾಗಿದೆ. ಅದರ ಆಡಳಿತ ವರ್ಗಕ್ಕೂ ಅಭಿನಂದನೆ ಸಲ್ಲಬೇಕು. ತುಮಕೂರಿನ ನೇತ್ರಶಸ್ತ್ರಚಿಕಿತ್ಸಕರ ಸಂಘ ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಘಟಿಸಿರುವುದನ್ನು ನೋಡಿದರೆ ಖಂಡಿತ ರಾಜ್ಯ ಮಟ್ಟದ ಬೃಹತ್ ಸಮಾವೇಶ ನಡೆಸಲು ಅವರು ಅತ್ಯಂತ ಸಮರ್ಥರು ಎಂಬುದು ತಿಳಿಯುತ್ತದೆ" ಎಂದರು.

ಸಮಾವೇಶದ ಅಂಗವಾಗಿ ಅನೇಕ ಮೆಡಿಕಲ್ ಕಂಪನಿಗಳು ನೇತ್ರ ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟಂತೆ ಅನೇಕ ವೈದ್ಯಕೀಯ ಉಪಕರಣಗಳನ್ನು ಪ್ರದರ್ಶಿಸಿದರು. ಆಧುನಿಕ ವೈದ್ಯಕೀಯ ಉಪಕರಣಗಳು ವೈದ್ಯರು ಮತ್ತು ಸಾರ್ವಜನಿಕರಿಗೆ ಈ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯನ್ನು ಪರಿಚಯಿಸಿತು.

ಇದೇ ಸಂದರ್ಭದಲ್ಲಿ ಟಿ.ಓ.ಎಸ್. ಲೋಗೋ ಅನಾವರಣ ಮಾಡಲಾಯಿತು. ತಜ್ಞರಿಗೆ ಸನ್ಮಾನ ಮಾಡಲಾಯಿತು.

ಕೆ.ಓ.ಎಸ್. ಸಂಸ್ಥೆಯು ರಾಷ್ಟ್ರದಲ್ಲೇ ಅತಿ ಹೆಚ್ಚು ದೊಡ್ಡ ಸಂಸ್ಥೆಯಾಗಿ ಬೆಳೆದಿದ್ದು ಹಾಗೂ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಏಕೈಕ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ 3,300 ಸದಸ್ಯರಿದ್ದಾರೆ.







## ಹುಟ್ಟಿದ ಪ್ರತಿ ಮಗುವೂ ಮೊದಲ ದಿನದಿಂದಲೇ 25 ಸಿಗರೇಟ್ ಸೇದುತ್ತಿದೆ!

◀◀ ...5ನೇ ಪುಟದಿಂದ

ಆದರೆ, ಈಗ ಉಸಿರಾಡುವ ಗಾಳಿಯೇ ಎಷ್ಟು ಕಲಬೆರಕೆ ಆಗಿದೆ ಎಂದರೆ ಹುಟ್ಟಿದ ಮಗು ಕೂಡ ಉಸಿರಾಟದ ಮೂಲಕವೇ ಮೊದಲ ದಿನದಿಂದಲೇ ದಿನಕ್ಕೆ 25 ಸಿಗರೇಟುಗಳನ್ನು ಸೇದಿದಂತಾಗುತ್ತದೆ! ಹೀಗಾಗಿ, 25–30 ವಯಸ್ಸಿಗೇ ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿವೆ. ಇದನ್ನು ಹೇಳಲು ದೊಡ್ಡ ಸಂಶೋಧನೆಗಳೇನೂ ಅಗತ್ಯವಿಲ್ಲ. ಸಾಮಾನ್ಯ ಜ್ಞಾನದಿಂದಲೇ ಹೇಳಬಹುದು ಎನ್ನುತ್ತಾರೆ ಡಾ. ಅರವಿಂದ್ ಕುಮಾರ್.

ಮುಂಚೆ, ಶ್ವಾಸಕೋಶದ ಕ್ಯಾನ್ಸರ್ ಬಹುಮಟ್ಟಿಗೆ ಬೀಡಿ, ಸಿಗರೇಟು ಸೇದುವವರಲ್ಲಿ ಕಂಡುಬರುತ್ತಿತ್ತು. ಪ್ರತಿ 10 ಪ್ರಕರಣಗಳಲ್ಲಿ 9 ಪ್ರಕರಣಗಳು ಈ ವ್ಯಸನ ಇದ್ದವರನ್ನು ಕಾಡುತ್ತಿತ್ತು. ಆದರೆ ಈಗ ಸಿಗರೇಟ್ ಸೇದುವವರು, ಸೇದದವರು ಇಬ್ಬರಲ್ಲೂ ಸಮನಾಗಿ ಕಂಡುಬರುತ್ತಿದೆ. ಅಂದರೆ 10 ಪ್ರಕರಣಗಳನ್ನು ತೆಗೆದುಕೊಂಡರೆ, 5 ಕೇಸುಗಳಲ್ಲಿ ಸಿಗರೇಟ್ ದುರಭ್ಯಾಸ ಇಲ್ಲದವರನ್ನೂ ಶ್ವಾಸಕೋಶದ ಕ್ಯಾನ್ಸರ್ ಬಾಧಿಸುತ್ತಿದೆ. ಉಸಿರಾಡುವ ಗಾಳಿಯ ಮೂಲಕವೇ ಸಿಗರೇಟ್ ಸೇದಿದಷ್ಟು ಹಾನಿಯಾಗುತ್ತಿರುವಾಗ ಇಂತಹ ಪರಿಣಾಮ ಕಂಡುಬರುವುದು ಸಹಜ ತಾನೇ ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯ. ಈ ಕಾರಣಕ್ಕಾಗಿಯೇ, ಮುಂಚೆ ಗಂಡಸರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಇದು ಈಗ ಮಹಿಳೆಯರಲ್ಲೂ ಜಾಸ್ತಿಯಾಗಿದೆ.

ಸಿಗರೇಟು ಪ್ಯಾಕಿನ ಮೇಲೆ "ಧೂಮಪಾನ ಆರೋಗ್ಯಕ್ಕೆ ಹಾನಿಕರ" ಎಂದು ಅಚ್ಚು ಹಾಕಿಬಿಡಬಹುದು. ಆದರೆ, ಉಸಿರಾಡುವ ಪ್ರಾಣವಾಯುವೇ ಸಿಗರೇಟಿನಷ್ಟು ಅಪಾಯಕಾರಿಯಾದರೆ ಎಲ್ಲಿ, ಏನೆಂದು ಅಚ್ಚು ಹಾಕುವುದು? ದೆಹಲಿಯ ವಾಯು ಮಾಲಿನ್ಯ ಬೆಂಗಳೂರು ಮತ್ತು ಇತರರ ನಗರಗಳಿಗೂ ಹಬ್ಬಿದರೆ ಆಶ್ಚರ್ಯವಿಲ್ಲ.

▪ ಸಂದರ್ಶನದ ಅನುವಾದ: ಬಿ.ಎಸ್. ವೆಂಕಟೇಶ್ ಪ್ರಸಾದ್

**‘ರಾಮಚಾರಿತ್ರ ಮಂಜರಿ’ ಎನ್ನುವ ತಮ್ಮ ಕೃತಿಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಈ ಪ್ರಸಂಗವನ್ನು ನೆನಪು ಮಾಡಿಕೊಳ್ಳುತ್ತಾ “ಕರುಣಾಳು ಶ್ರೀರಾಮ ನೊಂದ ನಾಯಿಗೂ ನ್ಯಾಯ ಕೊಟ್ಟ ಆದರ್ಶ ದೊರೆ” ಎಂದಿದ್ದಾರೆ.**

# ಶ್ರೀರಾಮ ಸರ್ವಕಾಲದಲ್ಲೂ ಶ್ರೇಷ್ಠ ಆಡಳಿತಗಾರ

**ಅರ್ಚನೆ**



ಡಾ.ವ್ಯಾಸನಕರೆ ಪ್ರಭಂಜನಾಚಾರ್ಯ
ವಿದ್ವಾಂಸರು ಮತ್ತು ಪ್ರವಚನಕಾರರು
ಮೊ. 94482 95027

ಆದಿಕವಿ ವಾಲ್ಮೀಕಿ ರಾಮಾಯಣ ಮಹಾಕಾವ್ಯ ರಚಿಸಿರುವುದು ಸರಿಯಷ್ಟೆ. ಶ್ರೀರಾಮನ ಜನನದಿಂದ ಆತ ರಾವಣವನ್ನು ಸಂಹರಿಸಿ ಅಯೋಧ್ಯೆಯಲ್ಲಿ ಪಟ್ಟಾಭಿಷೇಕವಾಗುವ ತನಕದ ಕತೆಯನ್ನು ಎಲ್ಲರೂ ಕೇಳಿರುತ್ತಾರೆ. ಅಲ್ಲಿಗೆ ರಾಮಾಯಣದ ಕತೆ ಮುಗಿಯಿತು ಎನ್ನುವ ಭಾವನೆ ಎಲ್ಲರಲ್ಲೂ ಇದೆ. ಆದರೆ ವಾಸ್ತವವಾಗಿ ಶ್ರೀರಾಮನ ಶ್ರೇಷ್ಠ ಆಡಳಿತವನ್ನು ಕುರಿತು ವಾಲ್ಮೀಕಿ ತಮ್ಮ ಕಾವ್ಯವನ್ನು ಮುಂದುವರಿಸಿದ್ದಾರೆ. ಅದನ್ನು ‘ಉತ್ತರಕಾಂಡ’ ಎಂದಿರುವರು. ಕೆಲವರು ಇದನ್ನು ವಾಲ್ಮೀಕಿ ಬರೆದಿಲ್ಲ, ನಂತರ ಯಾರೋ ಬರೆದಿದ್ದಾರೆ ಎಂದು ವಾದ ಮಾಡುತ್ತಾರೆ. ವಾಲ್ಮೀಕಿ ಅನಂತರ ಸಂಸ್ಕೃತ ಸಾಹಿತ್ಯದಲ್ಲಿ ಮಹತ್ವಕೃತಿಗಳನ್ನು ರಚಿಸಿದ ಭಾಸಕವಿ, ಕಾಳಿದಾಸ ಮತ್ತು ಭವಭೂತಿ ಮೊದಲಾದವರು ವಾಲ್ಮೀಕಿಗಳೆ ಉತ್ತರಕಾಂಡ ಕಾವ್ಯವನ್ನು ರಚಿಸಿದ್ದಾರೆ, ಎಂದಿದ್ದಾರೆ. ಸಾಹಿತ್ಯದ ದೃಷ್ಟಿಯಿಂದಲೇ ಈ ಭಾಗ ವಾಲ್ಮೀಕಿಗಳೆ ರಚನೆ ಮಾಡಿದ್ದಾರೆ ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ.

ರಾಮಾಯಣ ಮಹಾಕಾವ್ಯವನ್ನು ಅರ್ಥಮಾಡಿಕೊಳ್ಳಲು ಉತ್ತರಕಾಂಡವು ಸಹಾಯ ಮಾಡುತ್ತದೆ. ಉದಾಹರಣೆಗೆ ಹೇಳುವುದಾದರೆ ರಾವಣ, ಕುಂಭಕರ್ಣ, ಶೂರ್ಪನಖಿ, ಸುಗ್ರೀವ, ಹನುಮಂತ ಮೊದಲಾದವರ ಜನನದ ರಹಸ್ಯಗಳನ್ನು ಈ ಭಾಗದಲ್ಲಿ ವಿವೇಚನೆ ಮಾಡಲಾಗಿದೆ. ಶ್ರೀರಾಮ ರಾಜನಾಗಿ ಮಾಡಿದ ಅನೇಕ ಜನಪರ ಕಾರ್ಯಗಳನ್ನು ಇಲ್ಲಿ ಕಾಣಬಹುದು. ಅದೇ ರೀತಿ ಶ್ರೀರಾಮನ ವ್ಯಕ್ತಿತ್ವವನ್ನು ಪ್ರಶ್ನೆ ಮಾಡುವ ‘ಶಂಬೂಕನವಧೆ’ ಹಾಗೂ ‘ಸೀತಾಪರಿತ್ಯಾಗ’ ಮೊದಲಾದ ವಿಚಾರಗಳು ಇಲ್ಲಿ ಬಂದಿವೆ. ಅವುಗಳಿಗೆ ಸಮರ್ಥವಾದ ಕಾರಣಗಳನ್ನು ಅನಂತರ ಬಂದ ವ್ಯಾಖ್ಯಾನಕಾರರು ತಿಳಿಸಿದ್ದಾರೆ.



ಆದಿಕವಿ ವಾಲ್ಮೀಕಿ

13ನೆಯ ಶತಮಾನದಲ್ಲಿದ್ದ ದ್ವೈತಮತ ಸ್ಥಾಪಕರಾದ ಶ್ರೀಮಧ್ವಾಚಾರ್ಯರು ‘ಮಹಾಭಾರತ ತಾತ್ಪರ್ಯ ನಿರ್ಣಯ’ ಎನ್ನುವ ತಮ್ಮ ಗ್ರಂಥದಲ್ಲಿ ರಾಮಾಯಣದಲ್ಲಿ ಕಾಣಬರುವ ಅನೇಕ ವಿಚಾರಗಳಿಗೆ ಸೂಕ್ತವಾದ ವ್ಯಾಖ್ಯಾನವನ್ನು ನೀಡಿ ತಾತ್ವಿಕ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ.

ಭಾರತದ ಪ್ರಾಚೀನ ಕೃತಿಗಳನ್ನು ಅಧ್ಯಯನ ಮಾಡುವಾಗ ಇಂದಿನ ಪರಿಸ್ಥಿತಿಗಳೊಡನೆ ಪ್ರಾಚೀನವಾದ ವಿಚಾರಗಳನ್ನು ಹೋಲಿಸಬಾರದು. ಪ್ರಾಣಿಗಳು ಮಾತನಾಡುತ್ತವೆಯೆ ಎಂದುಕೊಂಡರೆ ಕತೆಯ ಆಶಯವೇ ಅರ್ಥವಾಗುವುದಿಲ್ಲ. ಮಹಾಭಾರತದಲ್ಲಿ ಬರುವ ‘ಯಕ್ಷಪ್ರಶ್ನೆ’ ಪ್ರಸಂಗದಲ್ಲಿ ಮೊದಲು ಮಾತನಾಡುವುದು ಒಂದು ಬಕಪಕ್ಷಿಯೇ. ಅದರಂತೆ ಶಾಂತಿಪರ್ವದಲ್ಲಿ ಬರುವ ಅನೇಕ ಪ್ರಸಂಗಗಳು ಪ್ರಾಣಿಗಳ ಸಂಭಾಷಣೆಯಲ್ಲೇ ನಿರೂಪಿತವಾಗಿದೆ. ಪಂಚತಂತ್ರ ಕೃತಿಯಲ್ಲಿ ಇಡೀ ಪ್ರಾಣಿಕುಲವೇ ಪ್ರಮುಖ ಪಾತ್ರಗಳಾಗಿವೆ. ಕರ್ನಾಟಕದಲ್ಲಿ ಸಾಕಷ್ಟು ಪ್ರಸಿದ್ಧಿಯಾಗಿರುವ ‘ಪುಣ್ಯಕೋಟಿ ಕತೆ’ ಅಥವಾ ‘ಗೋವಿನ ಹಾಡು’ ಖಂಡಕಾವ್ಯದಲ್ಲಿ ಹಸು–ಹುಲಿಗಳೆ ಪ್ರಮುಖ ಪಾತ್ರಗಳು. ಆ ಕತೆಯ ಮೂಲಕ ಸತ್ಯದ ಪ್ರಾಮುಖ್ಯತೆಯನ್ನು ಹೇಳ ಹೊರಟಿದ್ದಾನೆ ಎಂದು ಭಾವಿಸಿ ಕೃತಿ ಓದಿದರೆ ಸಿಗುವ ಸಂದೇಶ ತುಂಬಾ ದೊಡ್ಡದು.



ಶ್ರೀರಾಮ ಪಟ್ಟಾಭಿಷೇಕ

ಇಲ್ಲಿನ ಕತೆಯೂ ಅದೇ ರೀತಿಯಿದೆ. ಶ್ರೀರಾಮನ ಆಡಳಿತದಲ್ಲಿ ಹೇಗೆ ರಾಜ, ಪ್ರಜೆಗಳಿಗೆ ಸ್ಪಂದನೆ ಮಾಡುತ್ತಿದ್ದ ಎನ್ನುವ ಅಂಶ ಹೆಚ್ಚು ಗಮನ ಸೆಳೆಯುತ್ತದೆ. ಅದೇ ರೀತಿ ದೇಶದ ಧಾರ್ಮಿಕ ಕ್ಷೇತ್ರ ಎಷ್ಟು ಶುದ್ಧವಾಗಿರಬೇಕು ಎನ್ನುವ ಆಶಯವನ್ನು ಈ ಕತೆ ಹೇಳುತ್ತದೆ. ಈ ಆಶಯ ಇಂದಿಗೂ ಅಗತ್ಯವಾಗಿದೆ.

ಶ್ರೀರಾಮನ ನ್ಯಾಯಪರತೆ ಮತ್ತು ಆ ಕಾಲದ ಧಾರ್ಮಿಕ ಸ್ಥಿತಿಯ ವಿಡಂಬನೆಗೆ ನಾಯಿಯ ಕತೆಯ ಪ್ರಸಂಗವನ್ನು ನೋಡಬಹುದು. ಒಮ್ಮೆ ಶ್ರೀರಾಮ ಸಭೆ ನಡೆಸುತ್ತಿದ್ದಾಗ ನಾಯಿಯೊಂದು ಅಲ್ಲಿಗೆ ಆಗಮಿಸಿ ತನ್ನ ಮುಂದಿನ ಎರಡು ಕಾಲುಗಳನ್ನು ಎತ್ತಿ ಹಿಡಿದುಕೊಂಡು ‘ಭಕ್ತವತ್ಸಲ ನನ್ನನ್ನು ಪಾಲಿಸು’ ಎಂದು ಕೂಗಿಕೊಳ್ಳುತ್ತದೆ. ಅದನ್ನು ಗಮನಿಸಿದ ಶ್ರೀರಾಮ ಅದರ ಅಹವಾಲು ಕೇಳಲು ಸೇವಕರನ್ನು ಕಳುಹಿಸುವುದಿಲ್ಲ, ತನ್ನ ತಮ್ಮ ಲಕ್ಷ್ಮಣನನ್ನೇ ಕಳುಹಿಸುತ್ತಾನೆ.

ಲಕ್ಷ್ಮಣ ನಾಯಿಯ ಬಳಿ ಬಂದು ‘ರಾಮರಾಜ್ಯದಲ್ಲಿ ನಿನಗಾವ ಭಯ’ ಎಂದು ಪ್ರಶ್ನೆ ಮಾಡುತ್ತಾನೆ. ಆಗ ನಾಯಿ ‘ನಾನು ಶ್ರೀರಾಮನನ್ನೇ ಕಂಡು ನನ್ನ ಸಮಸ್ಯೆಯನ್ನು ಹೇಳಿಕೊಳ್ಳಬೇಕಾಗಿದೆ’ ಎನ್ನುತ್ತದೆ. ಲಕ್ಷ್ಮಣ ಹಿಂದಿರುಗಿ ರಾಮನಿಗೆ ವಿಷಯ ಹೇಳುತ್ತಾನೆ. ಶ್ರೀರಾಮ ಲಕ್ಷ್ಮಣನಿಗೆ ನಾಯಿಯನ್ನು ಕರೆತರಲು ಹೇಳುತ್ತಾನೆ. ಪುನಃ ನಾಯಿಯ ಬಳಿ ಬಂದು ‘ನೀನು ಸಭೆಗೆ ಬರಬಹುದು’ ಎಂದು ಆಹ್ವಾನ ಕೊಡುತ್ತಾನೆ.

ಶ್ರೀರಾಮ ನಾಯಿಯನ್ನು ‘ನಿನ್ನ ಸಮಸ್ಯೆ ಏನು’ ಎಂದು ಪ್ರಶ್ನೆ ಮಾಡುತ್ತಾನೆ. ಆಗ ನಾಯಿಯು ತನ್ನ ವೃತ್ತಾಂತವನ್ನು ಹೇಳುತ್ತದೆ. “ಎಣೆಯಿಲ್ಲದ ಗುಣಸಂಪನ್ನನಾದ ಲೋಕಕ್ಕೆ ಸನ್ಮಂಗಲವನ್ನುಂಟು ಮಾಡುತ್ತಿರುವ ಶ್ರೀರಾಮನೇ ನನ್ನ ಸಮಸ್ಯೆಯನ್ನು ಕೇಳು. ನೀನು ರಾಜ್ಯವಾಳುತ್ತಿರುವಾಗ ಸರ್ವಾರ್ಥ ಸಿದ್ಧಿ ಎನ್ನುವ ಸನ್ಯಾಸಿ, ಯಾವುದೇ ತಪ್ಪು ಮಾಡದ, ದೀನನಾದ ನನ್ನನ್ನು ಕೋಲಿನಿಂದ ಹೊಡೆದಿರುವನು. ಅವನಿಗೆ ಸೂಕ್ತ ಶಿಕ್ಷೆ ಕೊಡು”.

ಶ್ರೀರಾಮ ಸರ್ವಾರ್ಥ ಸಿದ್ಧಿಯನ್ನು ಕರೆಸಿ ವಿಚಾರಣೆ ಮಾಡಿದಾಗ ನಾಯಿ ಹೇಳಿದ ಮಾತು ಸತ್ಯವೆಂದು ಗೊತ್ತಾಗುತ್ತದೆ. ಈ ಸನ್ಯಾಸಿಗೆ ಏನು ಶಿಕ್ಷೆ ಕೊಡಬೇಕು ಎಂಬ ಚರ್ಚೆಯಾಗುತ್ತದೆ. ಕೊನೆಗೆ ಶ್ರೀರಾಮ ನೊಂದ ನಾಯಿಯನ್ನೇ ಕೇಳೋಣ ಎಂದುಕೊಂಡು ‘ಈ ಅಪರಾಧಿಗೆ ಏನೂ ಶಿಕ್ಷೆ ಕೊಡಬೇಕು’ ಎಂದು ಪ್ರಶ್ನೆ ಮಾಡುತ್ತಾನೆ. ಆಗ ನಾಯಿ “ಶ್ರೀರಾಮ ಹತ್ತಿರದ ಕಾಲಂಜರ ಮಠದ ಕುಲಪತಿ ಸ್ಥಾನ ಖಾಲಿಯಿದೆ. ಈತನನ್ನು ಅಲ್ಲಿಗೆ ಕುಲಪತಿಯನ್ನಾಗಿ ನೇಮಿಸು” ಎನ್ನುತ್ತದೆ. ‘ಅಪರಾಧಿಗೆ ದೊಡ್ಡ ಸ್ಥಾನ ಕೊಡುವುದು ಉಂಟೇ’ ಎಂದು ಅಲ್ಲಿದ್ದ ಎಲ್ಲರೂ ಪ್ರಶ್ನೆ ಮಾಡುತ್ತಾರೆ. ಶ್ರೀರಾಮ ತಕ್ಷಣವೇ ಸರ್ವಾರ್ಥ ಸಿದ್ಧಿಗೆ ಕುಲಪತಿ ಸ್ಥಾನವನ್ನು ಕೊಡುತ್ತಾನೆ.

‘ಎಲ್ಲೈ ಪ್ರಭುವಾದ ಶ್ರೀರಾಮನೇ ಶಿಕ್ಷೆಗೊಳಪಡಬೇಕಾದ ವಿಪ್ರನಿಗೆ ಕುಲಪತಿ ಸ್ಥಾನ ಕೊಡುವುದುಂಟೇ’ ಎಂದು ಸಭೆಯಲ್ಲಿದ್ದ ಎಲ್ಲಾ ಮಂತ್ರಿ ಮಹೋದಯರು ಪ್ರಶ್ನೆ ಮಾಡುತ್ತಾರೆ. ಆಗ ಶ್ರೀರಾಮ ‘ನೀನು ಏಕೆ ಅವನಿಗೆ ಕುಲಪತಿ ಸ್ಥಾನ ಕೊಡಿಸಿದೆ’ ಎಂದು ನಾಯಿಯನ್ನು ಪ್ರಶ್ನೆ ಮಾಡುತ್ತಾನೆ.

ಪೂರ್ವಜನ್ಮದ ಸ್ಮೃತಿಯಿದ್ದ ಕಾರಣ ನಾಯಿ ಹೀಗೆ ಹೇಳುತ್ತದೆ. “ಹಿಂದಿನ ಜನ್ಮದಲ್ಲಿ ಆ ಕಾಲಂಜರ ಮಠದ ಕುಲಪತಿಯಾಗಿದ್ದವನು ನಾನೇ. ಆಗ ಮಾಡಿದ ಪಾಪಕೃತ್ಯಗಳಿಂದಾಗಿ ನಿಕೃಷ್ಟವಾದ ನಾಯಿ ಜನ್ಮವನ್ನು ಈಗ ಪಡೆದಿದ್ದೇನೆ” ಎಂದು ಹೇಳಿ ಹೊರಟು ಹೋಗುತ್ತದೆ. ನಾಯಿಯ ಮಾತು ಕೇಳಿ ಎಲ್ಲರೂ ಆಶ್ಚರ್ಯಚಕಿತರಾಗುತ್ತಾರೆ.

ಇದೊಂದು ಧ್ವನಿಪೂರ್ಣವಾದ ಪ್ರಸಂಗ. ಕಾಲಂಜರದಲ್ಲಿ ಮಠಾಧಿಪತಿಯಾಗಿದ್ದ ವ್ಯಕ್ತಿ ಅನಂತರ ನಾಯಿಯಾದ ಎನ್ನುವ ಕತೆ ರಾಮಾಯಣದಲ್ಲೂ ಬರುತ್ತದೆ. ಅರ್ಚಕರು, ಮಠಾಧಿಪತಿಗಳು ಮತ್ತು ಪೌರೋಹಿತ್ಯ ಮಾಡುವವರ ಜವಾಬ್ದಾರಿಯನ್ನು ಅತ್ಯಂತ ಧ್ವನಿಪೂರ್ಣವಾಗಿ ಈ ಪ್ರಸಂಗದಲ್ಲಿ ಹೇಳಲಾಗಿದೆ. ಸಾರ್ವಜನಿಕ ಹುದ್ದೆಯಲ್ಲಿರುವವರು ತಮ್ಮ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡರೆ ಅವರು ನಾಯಿಯಾಗಿ ಹುಟ್ಟುತ್ತಾರೆ ಎನ್ನುವುದು ಈ ಕತೆಯ ಸಂದೇಶ.



ದೂರುದಾರ

ತನ್ನನ್ನು ವಿನಾಕಾರಣ ದಂಡಿಸಿದ ಸರ್ವಾರ್ಥ ಸಿದ್ಧಿಯನ್ನು ಕಾಲಂಜರಮಠಕ್ಕೆ ಅಧಿಪತಿಯಾಗಿ ನೇಮಿಸಿದರೆ ಖಂಡಿತ ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟುತ್ತಾನೆ ಎನ್ನುವ ವಿಶ್ವಾಸ ನಾಯಿಯದು. ಆ ಸನ್ಯಾಸಿಗೆ ಯಾರು ಶಾಪ ಕೊಡಬೇಕಾಗಿಲ್ಲ. ಶಿಕ್ಷೆ ಕೊಡಬೇಕಾಗಿಲ್ಲ, ಅವನ ತಪ್ಪುಗಳೇ ಅವನನ್ನು ಹಣಿಯುತ್ತವೆ.

‘ರಾಮಚಾರಿತ್ರ ಮಂಜರಿ’ ಎನ್ನುವ ತಮ್ಮ ಕೃತಿಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಈ ಪ್ರಸಂಗವನ್ನು ನೆನಪು ಮಾಡಿಕೊಳ್ಳುತ್ತಾ “ಕರುಣಾಳು ಶ್ರೀರಾಮ ನೊಂದ ನಾಯಿಗೂ ನ್ಯಾಯ ಕೊಟ್ಟ ಆದರ್ಶ ದೊರೆ” ಎಂದಿದ್ದಾರೆ.

ನಾಯಿಯ ಈ ಪ್ರಸಂಗ ಪ್ರಪಂಚದ ಬೇರೆ ಸಾಹಿತ್ಯ ಕೃತಿಗಳಿಗೂ ಪ್ರೇರಣೆ ಕೊಟ್ಟಿದೆ. ಅರಬ್ಬರ ಖಲೀಫ್‌ನ ಖಾಸಗಿ ಕೊಠಡಿಯ ಎದುರು ಕಟ್ಟಿದ್ದ ಗಂಟೆಯನ್ನು ಒಂಟೆಯೊಂದು ಭಾರಿಸುತ್ತದೆ. ಗಂಟೆಗೆ ಕಟ್ಟಿದ ಹುಲ್ಲಿನ ಹಗ್ಗದ ಆಸೆಗೆ ಒಂಟೆ ಗಂಟೆ ಭಾರಿಸಿದೆ ಎಂದು ಅಧಿಕಾರಿಗಳು ಭಾವಿಸಿಕೊಳ್ಳುತ್ತಾರೆ. ಗಂಟೆಯ ಶಬ್ದ ಕೇಳಿ ಹೊರ ಬಂದ ಖಲೀಫ್ ಒಂಟೆಯನ್ನು ನೋಡಿ ಸತ್ಯವೇನು ಎನ್ನುವುದನ್ನು ತಿಳಿದುಕೊಳ್ಳುತ್ತಾನೆ. ತಕ್ಷಣ ಒಂಟೆಯ ಒಡೆಯನನ್ನು ಕರೆಸಿ ‘ಒಂಟೆಗೆ ಸೂಕ್ತ ಆಹಾರ ಕೊಟ್ಟಿಲ್ಲ. ಕೂಡಲೇ ಅದಕ್ಕೆ ಆಹಾರ ಕೊಡುವಂತೆ’ ಸೂಚಿಸುತ್ತಾನೆ.

ಉತ್ತರಕಾಂಡದಲ್ಲಿ ಬರುವ ನಾಯಿಯ ಕತೆಯ ಪ್ರಸಂಗ ಅತ್ಯಂತ ಅರ್ಥಪೂರ್ಣವಾಗಿದೆ. ಶ್ರೀರಾಮನ ವ್ಯಕ್ತಿತ್ವ ಮತ್ತು ಧಾರ್ಮಿಕ ನಾಯಕರ ಕಾರ್ಯವಿಧಾನವನ್ನು ತಿಳಿಸುವ ಪ್ರಸಂಗವಿದು.

■ ನಿರೂಪಣೆ: ಶ್ರೀವತ್ಸ

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**